

# ಅಧ್ಯಾಯ ೨ ಕರ್ನಾಟಕದ ಆಡಳಿತ ವ್ಯವಸ್ಥೆ



## ಅಧ್ಯಾಯ ೭



# ಕರ್ನಾಟಕದ ಆಡಳಿತ ವ್ಯವಸ್ಥೆ

ಕರ್ನಾಟಕದ ಜನತೆಯ ವ್ಯವಹಾರಗಳ ನಿಯಂತ್ರಣ ಹಾಗೂ ಉಸ್ತುವಾರಿಗಳನ್ನು ಹೊಂದಿರುವ ಆಡಳಿತ ವ್ಯವಸ್ಥೆಯನ್ನು ಅರಿಯಬೇಕಾದರೆ, ಚಾರಿತ್ರಿಕ ಅವಧಿಯಲ್ಲಿದ್ದ ಆಡಳಿತ ವ್ಯವಸ್ಥೆಗಳ ಹಿನ್ನಲೆಯನ್ನು ತಿಳಿಯಬೇಕು. ಕರ ಸಂಗ್ರಹವೂ ಸೇರಿದಂತೆ, ಅಸ್ತಿತ್ವದಲ್ಲಿರುವ ಬಹುತೇಕ ಆಡಳಿತ ಸಂಸ್ಥೆಗಳು, ಹಿಂದಿನ ಆಡಳಿತ ವ್ಯವಸ್ಥೆಗಳ ಮುಂದುವರಿಕೆಯಾಗಿದೆ.ಉದಾಹರಣೆಗೆ, ಗ್ರಾಮದ ಮುಖ್ಯಸ್ಥ ಅಥವಾ ಪಟೇಲ (ಗೌಡ) ಹಾಗೂ ಗ್ರಾಮ ಲೆಕ್ಕಿಗ (ಶಾನುಭೋಗ) – ಈ ಎರಡೂ ಹುದ್ದೆಗಳು ಹಿಂದಿನ ಕಾಲದ ಬಳುವಳಿಯಾಗಿದೆ.

ಹಿಂದೂ ರಾಜ್ಯನೀತಿಶಾಸ್ತ್ರದ ಪಠ್ಯಗಳಾದ ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿ ಹಾಗೂ ಕಮಂಡಕನ ನೀತಿಸಾರಗಳು ಭಾರತದ ಬೇರೆಡೆಯಲ್ಲೂ ಆಗಿರುವಂತೆ, ಕರ್ನಾಟಕದ ಆಡಳಿತದ ಮೇಲೂ ಪ್ರಭಾವ ಬೀರಿತು. ಪ್ರಾಚೀನ ಕಾಲದ ಶಿಲಾಶಾಸನಗಳು ಇದರ ಪ್ರಭಾವವನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಉದಾಹರಣೆಗೆ, ಗಂಗ ದುರ್ವಿನೀತನನ್ನು ಮನುವಿಗೆ ಹೋಲಿಸಿದರೆ, ಗಂಗ ನೀತಿಮಾರ್ಗನನ್ನು ಶುಕ್ರನ ನೀತಿಸಾರದ ತತ್ವಗಳ ಪ್ರಕಾರ ಭೂಮಿಯ ಆಡಳಿತವನ್ನು ನಡೆಸುತ್ತಿದ್ದುದನ್ನು ಹೇಳುತ್ತದೆ.

ಆಡಳಿತಾತ್ಮಕ ಸಂಸ್ಥೆಗಳು ಈ ಕೃತಿಗಳ ನಿರ್ದಿಷ್ಟ ಅಂಶಗಳನ್ನು ಪರಿಪಾಲಿಸುತ್ತಿದ್ದವು; ಸಂಧಿವಿಗ್ರಹಿ (ಯುದ್ಧ ಮಂತ್ರಿ) ಅಥವಾ ರಜ್ಜುಕನ ಹೊಣೆಗಾರಿಕೆ ಹಾಗೂ ಕರಗಳಾದ

ಭೂ ಕಂದಾಯ ಅಥವಾ ಆಸ್ತಿ ಕಂದಾಯ ವಿಧಿಸುವಿಕೆಯನ್ನು ಈ ಚಾರಿತ್ರಿಕ ಆಚರಣೆಗಳ ಆಧಾರದ ಮೇಲೆ ರೂಪಿಸಲಾಗಿತ್ತು. ಮನು ನೀಡಿದ ನಿರ್ದಿಷ್ಟ ರೂಪರೇಷೆಗಳ ಮೇಲೆ, ಆಡಳಿತಾತ್ಮಕ ವಿಭಜನೆಗಳಾದ ದಶಗ್ರಾಮ (೧೦ ಗ್ರಾಮಗಳು), ಬೆಳ್ವೊಲ (೩೦೦ ಗ್ರಾಮಗಳ ಪ್ರಾಂತ) ಇತ್ಯಾದಿಗಳನ್ನು ಸ್ಥಾಪಿಸಲಾಗಿತ್ತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ, ಪರಾಶರ ಮಾಧವಿಯದಲ್ಲಿ ತಿಳಿಸಿರುವಂತೆ, ಮನು ಹೇಳಿರುವ ಆಣತಿಗಳ ಪ್ರಕಾರ, ಭೂ ಕಂದಾಯವನ್ನು ನಿರ್ಧರಿಸಲಾಗುತ್ತಿತ್ತು. ಕರ್ನಾಟಕದಲ್ಲಿ ರಚಿಸಲ್ಪಟ್ಟ ಆರಂಭಿಕ ಸಂಸ್ಕೃತ ಪಠ್ಯಗಳಾದ 'ಮಾನಸೋಲ್ಲಾಸ' ಹಾಗೂ ಸೋಮದೇವ ಸೂರಿಯ 'ನೀತಿವಾಕ್ಯಾಮೃತ'ಗಳು ಈ ಪುರಾತನ ಬರಹಗಾರರ ಕೃತಿಗಳಿಗೆ ಪುಷ್ಟಿ ನೀಡಿವೆ. ಈ ಮೊದಲಿನ ಹಿಂದೂ ಅರಸರು ಅನುಸರಿಸುತ್ತಿದ್ದ ಆಡಳಿತ ವ್ಯವಸ್ಥೆಯನ್ನು, ನಂತರದ ಕಾಲದಲ್ಲಿ ಮುಸಲ್ಮಾನ ಅರಸರಾದ ಬಹಮನಿ ಸುಲ್ತಾನರು ಹಾಗೂ ಆದಿಲ್ ಶಾಹಿಗಳು ಹೆಚ್ಚು ಬದಲಾಯಿಸಲಿಲ್ಲ.

ಕದಂಬರು, ಗಂಗರು ಹಾಗೂ ಪ್ರಾರಂಭಿಕ ಚಾಲುಕ್ಯರಂತಹ ರಾಜಮನೆತನದ ರಾಜರು ಧರ್ಮಮಹಾರಾಜ ಎಂಬ ಬಿರುದನ್ನು ಹೊಂದಿದ್ದರು. ರಾಜನ ಮಂತ್ರಿಮಂಡಲದಲ್ಲಿ ಪ್ರಧಾನಮಂತ್ರಿ, ಸಂಧಿವಿಗ್ರಹಿ, ಪಸಾಸಯಿತ (ಪೋಷಾಕಿನ ಸ್ವಾಮಿ), ಮನೆವರ್ಗಡೆ (ರಾಜನ ಮನೆತನದ ಪಾರುಪತ್ಯಗಾರ ), ಅಂತಃಪುರಾಧ್ಯಕ್ಷ (ಅಂತಃಪುರದ ಮೇಲ್ವಿಚಾರಕ ), ಮಹಾಭಂಡಾರಿ (ಖಜಾಂಚಿ – ಸಿರಿಸಂಪತ್ತು ), ಮುಂತಾದವರಿದ್ದರು. ಹೊಯ್ಸಳರಅಡಿಯಲ್ಲಿ, ಬಹತ್ತರನಿ ಯೋಗಾಧಿಪತಿಗೆ ೭೨ ಇಲಾಖೆಗಳ ಹೊಣೆಗಾರಿಕೆಯನ್ನು ನೀಡಲಾಗುತ್ತಿತ್ತು.ಬಹುತೇಕ ಮಂತ್ರಿಗಳು ಸೇನಾಧಿಪತಿಗಳಾಗಿದ್ದು, ಅವರಿಗೆ ಮಹಾದಂಡನಾಯಕನೆಂಬ ಬಿರುದನ್ನು ನೀಡಲಾಗುತ್ತಿತ್ತು.ಪಟ್ಟಾಭಿಷೇಕವಾದ ರಾಜಕುಮಾರ ಅಥವಾ ಯುವರಾಜನೂ ರಾಜನ ಸಲಹಾ ಮಂಡಲಿಯ ಸದಸ್ಯನಾಗಿರುತ್ತಿದ್ದನು.ಯುದ್ಧ ಅಥವಾ ವಿದೇಶೀ ಮಂತ್ರಿಯ ಸುಪರ್ದಿನಲ್ಲಿ ರಾಜನ ಸನ್ನದು/ ಅಧಿಕಾರಪತ್ರ ಅಥವಾ ದೇಣಿಗೆಗಳು (ರಾಜ್ಯ ಪತ್ರಪಾಲಕ) ಇರುತ್ತಿತ್ತು.ಆತನಿಗೆ ಅದರ ಪಠ್ಯವನ್ನು ಬರೆಯುವ ಹೊಣೆಗಾರಿಕೆಯನ್ನೂ ನೀಡಲಾಗುತ್ತಿತ್ತು ಎಂದು ಪ್ರಾರಂಭಿಕ ಚಾಲುಕ್ಯ ಹಾಗೂ ರಾಷ್ಟ್ರಕೂಟರ ದಾಖಲೆಗಳಿಂದ ತಿಳಿದು ಬರುತ್ತದೆ.

## ಪ್ರಾರಂಭಿಕ ಯುಗ

ಮೌರ್ಯರ ಕಾಲದ ಶಾಸನ ಹಿಂದೆ ಇಸಿಲದಲ್ಲಿದ್ದ (ಚಿತ್ರದುರ್ಗದ ಜಿಲ್ಲೆಯ ಬ್ರಹ್ಮಗಿರಿ) ಇದ್ದ ಸರ್ಕಾರದ ಸ್ವರೂಪವನ್ನು ತಿಳಿಸುತ್ತದೆ.ಅಶೋಕನ ಶಿಲಾಶಾಸನಗಳು, ಪ್ರಾಂತೀಯ ಸರ್ಕಾರದ ಹೊಣೆಗಾರಿಕೆಯನ್ನು ಹೊತ್ತ ಆರ್ಯಪುತ್ರ ಅಥವಾ ಪ್ರಭಾರ ರಾಜಕುಮಾರನಿಗೆ, ಆಡಳಿತದ ವಿವಿಧ ಅಂಶಗಳನ್ನು ನಿರ್ವಹಿಸುವ ಮಹಾಮಾತ್ರರಿಂದ ನೆರವು ದೊರೆಯುತ್ತಿತ್ತು ಎಂದು ತಿಳಿಸಿವೆ. ಅವುಗಳ ಪೈಕಿ ಧರ್ಮಮಹಾಮಾತ್ರರು, ಮತ ಸಿದ್ಧಾಂತ, ಸಾಧು–ಸಂತರು ಹಾಗೂ ಕುಟುಂಬಸ್ಥರ ಧರ್ಮ–ಸಂಬಂಧಿತ ಕ್ರಿಯೆಗಳ ಎಲ್ಲ ವಿಷಯಗಳನ್ನೂ ನಿರ್ವಹಿಸಬೇಕಾಗಿತ್ತು.

ಕಾಲ ಹಾಗೂ ವಂಶಿಕ ಇತಿಹಾಸದ ವ್ಯತ್ಯಾಸಗಳ ಪರಿವೆಯೇ ಇಲ್ಲದೆ, ಕೆಲವು ಪುರಾತನ ಆಡಳಿತಾತ್ಮಕ ನೇಮಕಾತಿಗಳು ಆಧುನಿಕ ಕಾಲದಲ್ಲೂ ಮುಂದುವರೆದಿವೆ.ಕ್ರಿ.ಶ.೧–೨ನೆಯ ಶತಮಾನದಲ್ಲಿ ಶಾತವಾಹನರ ಆಧಿಪತ್ಯವು ಡೆಕ್ಕನ್ ಹಾಗೂ ಕರ್ನಾಟಕದಲ್ಲಿ ನಡೆಯುತ್ತಿದ್ದಾಗ, ಅಶೋಕನ ಶಿಲಾಶಾಸನಗಳಲ್ಲಿ ಹೇಳಿರುವ ರಜ್ಜುಕರ ಪದವಿಯು ಜನಪ್ರಿಯವಾಗಿತ್ತು.ಅವರ ಮುಖ್ಯ ಹೊಣೆಗಾರಿಕೆಯೆಂದರೆ ಭೂಮಾಪನ ಹಾಗೂ ಕಂದಾಯ ನಿಷ್ಕರಣೆಯಾಗಿತ್ತು.ಕದಂಬರು ಹಾಗೂ ಗಂಗರ ಅಡಿಯಲ್ಲಿ, ರಾಜ್ಯವನ್ನು ನಾಡುಎಂಬುದಾಗಿ ವಿಭಜನೆ ಮಾಡಲಾಗಿತ್ತು, ಪ್ರತಿಯೊಂದು ನಾಡಿನಲ್ಲೂ ಹಲವಾರು ಗ್ರಾಮಗಳಿದ್ದವು.ಗಂಗವಾಡಿ, ನೊಳಂಬವಾಡಿ ಹಾಗೂ ಇತರ ರಾಜ್ಯಗಳನ್ನು ವಿವಿಧ ನಾಡುಗಳಾಗಿ ವಿಂಗಡಿಸಲಾಗಿತ್ತು ಬಹುಶಃ ಕಂದಾಯ ವಸೂಲಾತಿ ಹಾಗೂ ಸಂಗ್ರಹಣೆಗಳ ಉದ್ದೇಶಗಳಿಗಾಗಿ, ಅವುಗಳನ್ನು ಮತ್ತೆ ಗ್ರಾಮಗಳ ಗುಂಪಾಗಿ ಉಪ–ವಿಭಜನೆ ಮಾಡಲಾಗುತ್ತಿತ್ತು. ಗ್ರಾಮದ ಮಹಾಜನರು, ಕೇಂದ್ರಾಧಿಕಾರದ ಯಾವುದೇ ಹಸ್ತಕ್ಷೇಪವಿಲ್ಲದೆ, ಸ್ಥಳೀಯ ಆಡಳಿತದ ಅಧಿಕಾರದ ಅನುಭವವನ್ನು ಪಡೆಯುತ್ತಿದ್ದರು.

ಕದಂಬರ ಉತ್ತರಾಧಿಕಾರಿಗಳಾದ ಚಾಲುಕ್ಯರು, ಭಾರತೀಯ ರಾಜಕೀಯ ನಕ್ಷೆಯ ಮೇಲೆ ಸಾಮ್ರಾಜ್ಯಶಾಹಿ ಗುಪ್ತರ ಮೇಲುಗೈ ಇದ್ದಾಗ ಆಳುತ್ತಿದ್ದರು.ಹಾಗಾಗಿ, ಎರಡೂ ರಾಜಮನೆತನಗಳ ಆಡಳಿತದ ಪರಂಪರೆಗಳನ್ನು ಅನುಸರಿಸುತ್ತಿದ್ದರು.ಚಾಲುಕ್ಯ ಅರಸರು ವಿನಮ್ರವಾದ ರಾಜನ್ ಎಂಬ ಬಿರುದನ್ನು ತೊರೆದು, ತಮ್ಮನ್ನು ಮಹಾರಾಜಾಧಿರಾಜ ಎಂದು ಕರೆದುಕೊಂಡು, ಪರಮೇಶ್ವರ ಹಾಗೂ ಪರಮಭಟ್ಟಾರಕರೆಂಬ ಇತರ ಬಿರುದುಗಳನ್ನು ಧರಿಸಿಕೊಂಡರು.ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನ ಮಂತ್ರಶಕ್ತಿ ಅಥವಾ ಮಂತ್ರಿಗಳಿಂದ ಸಲ್ಲಿಸಲಾಗುತ್ತಿದ್ದ ವಿನಮ್ರವಾದ ಸಲಹೆಯನ್ನು ಕುರಿತಾಗಿ ತಿಳಿಸುತ್ತದೆ.ಯುವರಾಜನು ಆಡಳಿತದಲ್ಲಿ ರಾಜನಿಗೆ ನೆರವಾಗುತ್ತಿದ್ದು ಕೆಲವೊಮ್ಮೆ, ರಾಜನ ಸಹೋದರರೂ ಆಡಳಿತದಲ್ಲಿ ತೊಡಗಿಕೊಳ್ಳುತ್ತಿದ್ದರು.

ಗಜಸೈನ್ಯ, ಅಶ್ವಪಡೆ, ಹಾಗೂ ಪದಾತಿಸೈನ್ಯ ವಿಭಾಗಗಳಿದ್ದು, ಚಾಲುಕ್ಯ ಸೈನ್ಯದಲ್ಲಿದ್ದ ನೂರಾರು ಆನೆಗಳನ್ನು ಕುರಿತಾಗಿ ಹ್ಯುಯ–ತ್ಸಾಂಗ್ ಮಾತನಾಡಿದ್ದಾನೆ.ಅವರು ಬಲಿಷ್ಠವಾದ ನೌಕಾಪಡೆಯನ್ನೂ ಹೊಂದಿದ್ದು ಅಂತಹ ಹಡಗುಪಡೆಯ ನೆರವಿನಿಂದಲೇ ಮಂಗಳೇಶನು ರೇವತಿದ್ವೀಪದ ಮೇಲೆ ಧಾಳಿ ನಡೆಸಿದನು. ಇಮ್ಮಡಿ ಪುಲಕೇಶಿಯು ಪುರಿಯನ್ನು ಸ್ವಾಧೀನಪಡಿಸಿಕೊಂಡನು. ವಿಜಯಸ್ಕಂದವರಗಳು, ಅಂದರೆ ಸೇನಾ ಶಿಬಿರಗಳ ಉಲ್ಲೇಖಗಳು ಹಲವಾರು ದಾಖಲೆಗಳಲ್ಲಿ ದೊರೆತಿವೆ.ಚಾಲುಕ್ಯರ ಬಲಿಷ್ಠ ಸೇನೆಯನ್ನು 'ಕರ್ನಾಟಬಲ' ಎಂದು ಕರೆಯಲಾಗುತ್ತಿದ್ದು ಅದನ್ನು ಅಜೇಯವೆಂದು ಪರಿಗಣಿಸಲಾಗಿತ್ತು.

ಸಿದ್ಧಾಯ ಎಂಬ ಭೂಕಂದಾಯದೊಂದಿಗೆ, ವಡ್ಡರಾವುಲ (ರಾಜ ಮನೆತನದ ಸದಸ್ಯರ ನೆರವಿಗಾಗಿ ವಿಧಿಸಲಾದ ಕಂದಾಯ), ಹೆರ್ಜುಂಕ (ಹೇರಿನ ಮೇಲಿನ ಕರ), ಕಿರುಕುಳ (ಸಾಗಣೆಯಾಗುತ್ತಿರುವ ಚಿಲ್ಲರೆ ಸರಕುಗಳ ಮೇಲಿನ ಸುಂಕ ), ಬೀಳ್ಕೊಡೆ (ವ್ಯಾಪಾರ ಕರ), ಪನ್ನಯ (ವೀಳ್ಯದೆಲೆಯ

ಮೇಲಿನ ಕರ) ಹಾಗೂ ಇತರ ಕರಗಳನ್ನು ಕುರಿತಾಗಿ ದಾಖಲೆಗಳಲ್ಲಿ ಬರೆಯಲಾಗಿದೆ.ವೃತ್ತಿ ತೆರಿಗೆಯನ್ನು ವಿಧಿಸುವುದು ಹಿಂದಿನ ಆಚರಣೆಯ ಮುಂದುವರಿಕೆಯಾಗಿದೆ.

ಗದ್ಯಾಣವೆಂಬ ಚಿನ್ನದ ನಾಣ್ಯವನ್ನು ಕುರಿತಾಗಿ ಪಟ್ಟದಕಲ್ಲಿನ ಪ್ರಾರಂಭಿಕ ಚಾಲುಕ್ಯರ ದಾಖಲೆಗಳಲ್ಲಿ ಹೆಸರಿಸಲಾಗಿದೆ.ನಂತರ, ಅದನ್ನು ವರಾಹ ಎಂದು ಕರೆದರು, ಬಹುಶಃ ಚಾಲುಕ್ಯರ ರಾಜಲಾಂಛನವಾದ ವರಾಹದ ಮೂಲ ಹೆಸರಿನಿಂದ ಇದು ಬಂದಿರಬಹುದು.ಅವರ ನಾಣ್ಯಗಳಲ್ಲಿ ವರಾಹದ ಗುರುತು ಇದ್ದಿರಬಹುದು.

ದೇಶವನ್ನು ಮಹಾರಾಷ್ಟ್ರಕ ಅಥವಾ ಮಹಾನ್ ಪ್ರಾಂತಗಳಾಗಿ ವಿಭಜಿಸಲಾಗಿದ್ದು ಅದನ್ನು ಮತ್ತೆ ರಾಷ್ಟ್ರಕ ಹಾಗೂ ಮಂಡಲಗಳೆಂಬ ಘಟಕಗಳಾಗಿ ಬೇರ್ಪಡಿಸಲಾಗಿತ್ತು.ವಿಷಯ ಅಥವಾ ಜಿಲ್ಲೆಯ ಮುಂದಿನ ಘಟಕವಾಗಿದ್ದರೆ, ಭಾಗ ಎಂಬ ಅದಕ್ಕಿಂತ ಕಿರಿಯ ಘಟಕದಲ್ಲಿ ಗ್ರಾಮಗಳ ಗುಂಪು ಇದ್ದಿರಬಹುದು.ಕದಂಬರ ಕಾಲದಲ್ಲಿ ಇದ್ದ ಘಟಕಗಳಾದ ದಶಗ್ರಾಮ, ದ್ವಾದಶಗ್ರಾಮ ಹಾಗೂ ಇತರ ಘಟಕಗಳು ಅಂತಹುದೇ ಆಗಿದ್ದವು.ಸಾಮ್ರಾಜ್ಯಶಾಹಿ ಪ್ರಾಂತಗಳೊಂದಿಗೆ, ಗಂಗರು, ಅಳುಪರು, ಬಾಣರು, ಸೇಂದ್ರಕರು ಹಾಗೂ ಇವರಂತಹ, ಸ್ವಾಯತ್ತತೆಯನ್ನು ಅನುಭವಿಸಿದ ಅಧೀನ ರಾಜಕುಮಾರರು ಆಳಿದ ಘಟಕಗಳು ಇದ್ದವು.ವಿಜಯಕ ಹಾಗೂ ಲೋಕಮಹಾದೇವಿಯರಂತಹ ಮಹಿಳೆಯರೂ ಸೇರಿದಂತೆ, ರಾಜಮನೆತನದ ಸದಸ್ಯರನ್ನು ಸಾಮ್ರಾಜ್ಯಶಾಹಿ ಪ್ರಾಂತಗಳಿಗೆ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗುತ್ತಿತ್ತು.

ಸ್ಥಳೀಯ ವಿಷಯಗಳ ಉಸ್ತುವಾರಿಯನ್ನು ಶಾಸನ ಸಭೆ ಹಾಗೂ ಸಾಂಪ್ರದಾಯಿಕ ವೃತ್ತಿ ಸಂಘಗಳು ನೋಡಿಕೊಂಡವು.ಬಾದಾಮಿ ಬ್ರಹ್ಮಪುರಿಯ (ಅಗ್ರಹಾರ) ಆಡಳಿತವನ್ನು ೨,೦೦೦ ಮಹಾಜನರು ವಹಿಸಿದರೆ, ಐಹೊಳೆಯಲ್ಲಿ ಅವರ ಸಂಖ್ಯೆ ೫೦೦ ಆಗಿತ್ತು.ಬಾದಾಮಿ ಹಾಗೂ ಬಹುಶಃ ಎಲ್ಲ ಪಟ್ಟಣಗಳಲ್ಲೂ ಚಪ್ಪಲಿ ಹೊಲಿಯುವವರು, ಹೂ ಮಾರುವವರು, ಹಾರ ಮಾರುವವರು, ಕಲ್ಲುಕುಟಿಗರು, ಮುಂತಾದ ವೃತ್ತಿ ಸಂಘಗಳು ಇದ್ದವು.ಪುಲಿಗೆರೆಯ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ) ದಾಖಲೆ ಆ ಸ್ಥಳದ ೧೮ ಪ್ರಕೃತಿ ಅಥವಾ ಜಾತಿಯ ಗುಂಪುಗಳನ್ನು ಕುರಿತಾಗಿ ಮಾತನಾಡುತ್ತದೆ.ಪುಲಿಗೆರೆಯಲ್ಲಿ ೩೦೦ ವ್ಯಾಪಾರಸ್ಥರ ಶಾಸನ ಸಭೆಯಿತ್ತು. ಯುವರಾಜ ವಿಕ್ರಮಾದಿತ್ಯನು ಪಟ್ಟಣಕ್ಕೆ ನೀಡಿದ ಸನ್ನದಿನ ಮೂಲಕ, ಮಹಾಜನರು, ನಗರರು (ವ್ಯಾಪಾರಿಗಳ ವೃತ್ತಿಸಂಘಗಳು) ಹಾಗೂ ೧೮ ಪ್ರಕೃತಿಗಳಿಗೆ ಮನ್ನಣೆ ದೊರೆಯಿತು.ನಂತರದ ವರ್ಷಗಳಲ್ಲಿ ಅಯ್ಯವೊಳೆ-೫೦೦ ಎಂದು ಸುಪ್ರಸಿದ್ಧವಾದ ಐಹೊಳೆಯ ವ್ಯಾಪಾರಿ ವೃತ್ತಿಸಂಘವು, ಆ ದಿನಗಳಲ್ಲೇ ಅಸ್ತಿತ್ವಕ್ಕೆ ಬಂದಿರುವುದು ಉಲ್ಲೇಖನಾರ್ಹ.


ರಾಜ ಲಾಂಛನ

ರಾಷ್ಟ್ರಕೂಟರ ಚರಿತ್ರಕಾರರಾದ ಡಾ.ಅಲ್ಟೇಕರ್‌ರವರ, "ರಾಷ್ಟ್ರಕೂಟರ ಸಾಮ್ರಾಜ್ಯದಲ್ಲಿ ರಾಜನು ಹೊಂದಿದ್ದ ಮಂತ್ರಿಮಂಡಲ ರಾಜಾಡಳಿತವ ಆಡಳಿತದ ಸಾಮಾನ್ಯ ರೂಪವಾಗಿತ್ತು" ಎನ್ನುತ್ತಾ, "ಅವರ ಸಾಮಂತ ರಾಜರು ಆಳುತ್ತಿದ್ದ ಪ್ರದೇಶಗಳಲ್ಲೂ ಇದೇ ತತ್ವದ ಆಧಾರದ ಮೇಲೆ ಆಳ್ವಿಕೆಯು ನಡೆಯುತ್ತಿತ್ತು," ಎಂದು ಹೇಳಿದ್ದಾರೆ. ರಾಜನ ಪಟ್ಟವು ಅನುವಂಶಿಕವಾಗಿದ್ದು, ರಾಜನು ತನ್ನ ಉತ್ತರಾಧಿಕಾರಿಯನ್ನು ಯುವರಾಜನಾಗಿ ನೇಮಕ ಮಾಡುತ್ತಿದ್ದನು. ಭಾರತದ ಅರಸರು ತಮ್ಮ ಉತ್ತರಾಧಿಕಾರಿಯನ್ನು ತಾವೇ ನೇಮಕ ಮಾಡುತ್ತಿದ್ದರೆಂದು ಬರಹಗಾರನೂ, ಚರಿತ್ರಕಾರನೂ ಆದ ಸುಲೈಮಾನ್ ಹೇಳಿದ್ದಾನೆ. ಮುಮ್ಮಡಿ ಕೃಷ್ಣನನ್ನು ಒಂದನೆಯ ಅಮೋಘವರ್ಷನ ಕಾಲದಲ್ಲಿ ಯುವರಾಜನಾಗಿ ನೇಮಕ ಮಾಡಲಾಯಿತು.ತನ್ನ ಮೂರನೆಯ ಮಗನಾದ ಗೋವಿಂದನನ್ನು ಧ್ರುವನು ಯುವರಾಜನಾಗಿ ನೇಮಕ ಮಾಡುವ ಮೂಲಕ, ಹಿರಿಯ ಮಗನಿಗೆ ಕಿರೀಟವು ಸೇರಬೇಕಿದ್ದರೂ, ಅದು ಕೆಲವೊಮ್ಮೆ ಅತ್ಯಂತ ಸಮರ್ಥನ ಪಾಲಾಗಬಹುದು ಎಂದು ಸೂಚಿಸಿದನು.

ರಾಷ್ಟ್ರಕೂಟರು ನೇಮಕ ಮಾಡಿಕೊಳ್ಳುತ್ತಿದ್ದ ಮಂತ್ರಿಗಳ ಸಂಖ್ಯೆಯನ್ನು ದಾಖಲೆಗಳು ನಿರ್ದಿಷ್ಟವಾಗಿ ತಿಳಿಸಿಲ್ಲ. ಆದರೆ, ಚಾಲುಕ್ಯರ ಕಾಲದಲ್ಲಿ ಇದ್ದಂತೆ, ಮಂತ್ರಿಗಳ ಪೈಕಿ ಮಹಾಸಂಧಿವಿಗ್ರಹಿಯು (ಯುದ್ಧ, ಶಾಂತಿ, ಹಾಗು ವಿದೇಶೀ ವ್ಯವಹಾರಗಳು) ಅತ್ಯಂತ ಮುಖ್ಯವಾದ ಮಂತ್ರಿಯಾಗಿದ್ದನು. ಸಾಲೋಟಗಿ ಶಾಸನದಲ್ಲಿ, ಮುಮ್ಮಡಿ ಕೃಷ್ಣನ ಅಡಿಯಲ್ಲಿ ನಾರಾಯಣನೆಂಬ ವ್ಯಕ್ತಿಯು ಈ ಪದವಿಯನ್ನು ಹೊಂದಿದ್ದನೆಂದು ವಿವರಿಸಲಾಗಿದೆ.ಗೋವಿಂದನ ಕಾಲದಲ್ಲಿ, ವಿಶೋತ್ತರನೆಂಬುವನು ಇದೇ ಪದವಿಯನ್ನು ಹೊಂದಿದ್ದನು. ಕಳಸದ (ಚಿಕ್ಕಮಗಳೂರು ಜಿಲ್ಲೆ) ದಾಖಲೆಯು, ವಿಶೋತ್ತರನು ದಂಡನಾಯಕನಾಗಿದ್ದನೆಂದೂ, ಬಾವುಟ, ಶಂಖ, ಚಾಮರ, ಬಿಳಿಯ ಛತ್ರಿ, ನಗಾರಿ ಹಾಗೂ ಇತರ ಗೌರವಗಳಿಗೆ ಅರ್ಹನಾಗಿದ್ದನೆಂದು ಸೂಚಿಸುತ್ತದೆ. ಪಂಚಮಹಾಶಬ್ದಗಳು ಎಂಬ ಐದು ಸಂಗೀತ ವಾದ್ಯಗಳಿಗೂ ಅವರು ಅರ್ಹರಾಗಿದ್ದರು. ಧ್ರುವನ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ವಿದೇಶೀ ವ್ಯವಹಾರಗಳ ಮಂತ್ರಿಯೂ ಇಂತಹ ಗೌರವಕ್ಕೆ ಅರ್ಹನಿದ್ದು, ಸಾಮಾನ್ಯವಾಗಿ ತಾಮ್ರಶಾಸನಗಳ ಸನ್ನದು ರೂಪಿಸುವ ಕಾರ್ಯವನ್ನೂ ಆತನಿಗೆ ಒಪ್ಪಿಸಲಾಗಿತ್ತು.ಈ ಅಧಿಕಾರಿಯು ಮಹಾಕ್ಷಪಟಲಾಧ್ಯಕ್ಷ ಅಥವಾ ಶಾಸನಗಳು ಅಥವಾ ದಾಖಲೆಗಳ ಪಾಲಕನೂ ಸಹ ಆಗಿದ್ದನು.

ರಾಜ್ಯವನ್ನು ಮಂಡಲ ಅಥವಾ ರಾಷ್ಟ್ರಗಳಾಗಿ ವಿಂಗಡಿಸಲಾಗಿತ್ತು. ರಾಜರು ನೇರವಾಗಿ ಆಳುತ್ತಿದ್ದ ಪ್ರಾಂತಗಳು ಅಥವಾ ರಾಷ್ಟ್ರಗಳು ಇದ್ದವು ಮಹಾಸಾಮಂತರು ಎಂಬ ಸಾಮಂತ ರಾಜರಿದ್ದರು.ಒಂದನೆಯ ಅಮೋಘವರ್ಷನ ಸಂಜನ್ ಶಾಸನ, ಆತನ ರಾಜ್ಯದಲ್ಲಿ ೧೬ ರಾಜ್ಯ ಅಥವಾ ಪ್ರಾಂತ್ಯಗಳು ಇದ್ದವೆಂದು ಹೇಳುತ್ತದೆ. ನಿಡಗುಂದಿಯ (ಗದಗ ಜಿಲ್ಲೆ) ದಾಖಲೆಯು, ನಂಬಿಕಸ್ಥ ದಂಡನಾಯಕನಾದ ಬಂಕೇಶನೆಂಬುವನು ಬನವಾಸಿ–೧೨,೦೦೦, ಬೆಳ್ವೊಲ–೩೦೦, ಕುಂದರ್ಗೆ–೭೦, ಕುಂದೂರು–೫೦೦ ಹಾಗೂ ಪುಲಿಗೆರೆ–೩೦೦ಗಳನ್ನು ಆಳಿದ್ದನ್ನು ಹೆಸರಿಸಿವೆ. ಇದು ವಿಸ್ತಾರವಾದ ಪ್ರದೇಶವನ್ನು ಒಳಗೊಂಡಿದ್ದರಿಂದ, ಆತನು ಒಂದಕ್ಕಿಂತ ಹೆಚ್ಚಿನ ಮಂಡಲ ಅಥವಾ ಪ್ರಾಂತದ ಮೇಲ್ವಿಚಾರಣೆಯನ್ನು ಮಾಡುತ್ತಿದ್ದನು ಎಂದು ಊಹಿಸಬಹುದು.

ಮಂಡಲ ಅಥವಾ ರಾಷ್ಟ್ರಗಳನ್ನು ವಿಷಯಗಳು ಅಥವಾ ಜಿಲ್ಲೆಗಳಾಗಿ ವಿಂಗಡಿಸಲಾಗಿತ್ತು.

ವಿಷಯಗಳ ಅಡಿಯಲ್ಲಿ, ಗ್ರಾಮಗಳ ಗುಂಪನ್ನು ಒಳಗೊಂಡ ನಾಡುಗಳನ್ನು ಸಣ್ಣ ಘಟಕಗಳಾಗಿ ವಿಂಗಡಿಸಲಾಗಿತ್ತು. ಬಹುಶಃ ನಾಡುಗಳನ್ನು ನಾಡಗೌಡ ಅಥವಾ ನಾಡಗಾವುಂಡನು ನೋಡಿಕೊಳ್ಳುತ್ತಿದ್ದು, ಇದೂ ಕೂಡ ಅನುವಂಶಿಕ ಪದವಿ ಆಗಿತ್ತೆಂದು ತೋರುತ್ತದೆ. ಶಿಕಾರಿಪುರದ (ಶಿವಮೊಗ್ಗ ಜಿಲ್ಲೆ) ಶಾಸನವೊಂದು ನಾಗರಖಂಡದ ನಾಡಗಾವುಂಡನು ಕಲಿವಿತ್ತರಸನೆಂಬ ವ್ಯಕ್ತಿಯಾಗಿದ್ದ ಆತನ ನಂತರ, ಆತನ ಪತ್ನಿ ಅಥವಾ ಆಕೆಯ ಮಗಳು ಈ ಪದವಿಯನ್ನು ಪಡೆದಿದ್ದರೆಂದು ತಿಳಿಸುತ್ತದೆ. ಗವುಂಡ (ಗ್ರಾಮಕೂಟ) ಅಥವಾ ಗ್ರಾಮದ ಮುಖ್ಯಸ್ಥನನ್ನು ಕುರಿತಾಗಿ ಹಲವಾರು ಶಾಸನಗಳಲ್ಲಿ ಹೆಸರಿಸಲಾಗಿದೆ ಸಾಲೋಟಗಿ ಶಾಸನದಲ್ಲಿ ಇರುವಂತೆ, ಕೆಲವು ಶಾಸನಗಳು ಗ್ರಾಮಕೂಟದ ಜೊತೆಗೆ, ಗ್ರಾಮಪತಿಯನ್ನು ಹೆಸರಿಸಿವೆ. ಪ್ರತಿಯೊಂದು ಗ್ರಾಮದಲ್ಲೂ, ಕಂದಾಯ ಆಡಳಿತದೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದ ಗ್ರಾಮದ ಮುಖ್ಯಸ್ಥನ ಅಡಿಯಲ್ಲಿ ಗ್ರಾಮದ ಸೇನೆಯೂ ಇದ್ದಿತು. ಹಲವಾರು ಆಡಳಿತಾತ್ಮಕ ವಿಂಗಡನೆಗಳಲ್ಲಿ ಮತ್ತಷ್ಟು ದೊಡ್ಡ ಮಂಡಲಿಗಳು ಇದ್ದವು.ಇಮ್ಮಡಿ ಕೃಷ್ಣನ ಶಾಸನದಲ್ಲಿ, ವಿಷಯ–ಮಹತ್ತರರ (ಹಿರಿಯರು) ಉಲ್ಲೇಖವಿದೆ ಇನ್ನೊಂದರಲ್ಲಿ ರಾಷ್ಟ್ರ–ಮಹತ್ತರರನ್ನು ಕುರಿತಾಗಿ ಹೇಳಲಾಗಿದೆ. ಈ ರೀತಿಯಲ್ಲಿ, ರಾಷ್ಟ್ರ, ವಿಷಯ ಹಾಗೂ ಗ್ರಾಮೀಣ ಸ್ಥರಗಳಲ್ಲಿ ಮಂಡಲಿಗಳು ಇದ್ದವು.

ರಾಷ್ಟ್ರಕೂಟ ದಾಖಲೆಗಳಲ್ಲಿ ತೆರಿಗೆಗಳಾದ ಉದ್ರಂಗ, ಉಪಾರಿಕ ಹಾಗೂ ಭಾಗಕರಗಳನ್ನು ಕುರಿತಾಗಿ ಹೇಳಲಾಗಿದ್ದು, ಈ ಪದಗಳು ಭೂ ಅಥವಾ ಭೂಕಂದಾಯ ತೆರಿಗೆಯನ್ನು ಸೂಚಿಸುತ್ತದೆ.ಇವುಗಳನ್ನು ಕನಿಷ್ಠ ಮೂರು ಕಂತುಗಳಲ್ಲಿ ಸಂಗ್ರಹಿಸಲಾಗುತ್ತಿದ್ದು ವಸ್ತುರೂಪದಲ್ಲೂ ಕರ ಸಂಗ್ರಹಣೆ ಆಗುತ್ತಿತ್ತು. ಸಾಮಾನ್ಯ ಸುಂಕ  ಅಥವಾ ಉಕ್ಕಡ ಸುಂಕವಾದ ಭುತೋಪಟ್ಟ–ಪ್ರತ್ಯಯವೆಂಬ ಕರವೂ ಇತ್ತು. ತುಪ್ಪ, ಚಪ್ಪಲಿ, ಹೂವು, ವೀಳ್ಯದೆಲೆ, ಇತ್ಯಾದಿ ಸರಕುಗಳ ಮೇಲೂ ಕರವನ್ನು ವಿಧಿಸಲಾಗುತ್ತಿತ್ತು. ಮನೆ ಹಾಗೂ ದೋಣಿಗಳ ಮೇಲೂ ಕರವನ್ನು ವಿಧಿಸಲಾಗುತ್ತಿತ್ತು.

ಮಳಖೇಡದಲ್ಲಿ ಖಾಯಂ ಸೈನ್ಯವಿತ್ತು. ಸಾಲೋಟಗಿಯ ದಾಖಲೆಯೊಂದು, ರಾಜಧಾನಿಯನ್ನು ಸ್ಥಿರಭೂತ–ಕಾಟಕ, ಅಂದರೆ, ಖಾಯಂ ದಂಡುಪ್ರದೇಶವೆಂದು ಉಲ್ಲೇಖಿಸುತ್ತದೆ. ಅಲ್ ಮಸೂದಿಯೆಂಬ ತಜ್ಞ ಭೂವೈಜ್ಞಾನಿಕ ಹಾಗೂ ಚರಿತ್ರಕಾರನು, ಕುದುರೆ ಹಾಗೂ ಆನೆಗಳನ್ನು ಸೈನ್ಯದಲ್ಲಿ ಬಳಸಲಾಗುತ್ತಿತ್ತು, ಬಹುತೇಕ ತುಕಡಿಗಳು ಪದಾತಿದಳವೇ ಆಗಿತ್ತು ಎಂದಿದ್ದಾನೆ. ಎಲ್ಲ ಅಧಿಕಾರಿಗಳು ಸೇನಾಧಿಪತಿಗಳಾಗಿದ್ದು ಸಾಮ್ರಾಜ್ಯದ ಬಳಕೆಗೆ ಸಿದ್ಧವಾದ ದೊಡ್ಡ ಸೈನ್ಯವನ್ನು ಸಾಮಂತರು ಹಾಗೂ ರಾಜ್ಯಪಾಲರು ನಿರ್ವಹಿಸುತ್ತಿದ್ದರು.

ಶಾಸನಗಳು ಸುವರ್ಣವೆಂಬ ನಾಣ್ಯವನ್ನು ಕುರಿತಾಗಿ ಹೇಳಿದರೂ, ಅವುಗಳ ತೂಕದ ಬಗ್ಗೆ ತಿಳಿದಿಲ್ಲ. ಡ್ರಮ್ಮಗಳು ಎಂಬ ಚಿನ್ನ ಹಾಗೂ ಬೆಳ್ಳಿಯ, ೬೫ ಗುಲಗಂಜಿ ತೂಕದ ನಾಣ್ಯಗಳೂ ಇದ್ದವು. ೪೮ ಗುಲಗಂಜಿಗಳ ಕಲಂಜು ಹಾಗೂ ಅದಕ್ಕೆ ದುಪ್ಪಟ್ಟು ಗಾತ್ರದ ಗದ್ಯಾಣಕಗಳೂ ಇದ್ದವು. ಕಾಸು (೧೫ ಗುಲಗಂಜಿ), ಮಂಜಾತಿ (೩ ೧/೨ ಗುಲಗಂಜಿ), ಹಾಗೂ ಅಕ್ಕಮ್ (ಮಂಜಾತಿಯ ೧/೨) ಎಂಬ ಇತರ ಚಿನ್ನದ ನಾಣ್ಯಗಳೂ ಇದ್ದವು. ಅಕ್ಕಮ್ ಎಂಬುದು ಸಾಮಾನ್ಯ ಚಲಾವಣೆಯಾಗಿದ್ದು, ಟಂಕಸಾಲೆಯನ್ನು ಅಕ್ಕಶಾಲೆ ಎಂದು ಕರೆಯಲಾಗುತ್ತಿತ್ತು.

ದಕ್ಷಿಣ ಕರ್ನಾಟಕದ ಮೇಲೆ ಆಧಿಪತ್ಯವನ್ನು ಸಾಧಿಸಿದ್ದ ಚೋಳರು, ವಿಭಿನ್ನ ರೀತಿಯಲ್ಲಿ ರಾಜ್ಯ ವಿಭಜನೆಯನ್ನು ಮಾಡಿದರು. ಮಂಡಲಮ್ ಅವರು ವಲಿನಾಡು ಅಥವಾ ಜಿಲ್ಲೆಗಳಾಗಿ ವಿಂಗಡಿಸಿ, ಅದನ್ನು ನಾಡು ಅಥವಾ ತಾಲ್ಲೂಕುಗಳಾಗಿ ವಿಭಜಿಸಿ, ಇವುಗಳನ್ನು ಮತ್ತೆ ಗ್ರಾಮಗಳು, ಉರುಗಳು, ಪುರಗಳು, ಮಂಗಳಗಳು ಹಾಗೂ ಅಗ್ರಹಾರಗಳಾಗಿ ವಿಭಜಿಸಿದ್ದರು. ವೇದೀಯ ಅಥವಾ ಇತರ ಅಧ್ಯಯನಗಳನ್ನು ಕೈಗೊಳ್ಳಲು ಬ್ರಾಹ್ಮಣರಿಗೆ ನೀಡಲಾದ ಗ್ರಾಮಗಳನ್ನು ಚತುರ್ವೇದೀಮಂಗಳಂ ಎಂದು ಕರೆಯಲಾಗುತ್ತಿತ್ತು. ವಿವಿಧ ಜಾತಿಗಳ ಜನರು ವಾಸಿಸುತ್ತಿದ್ದ ಈ ಗ್ರಾಮಗಳ ಕೆಲವು ಭಾಗಗಳನ್ನು ಚೇರಿ(ಕೇರಿ)ಎಂದು ಕರೆಯಲಾಗುತ್ತಿತ್ತು. ಜೊತೆಗೆ, ಮಂತ್ರಿಗಳು, ಅರ್ಚಕರು, ಸೇನಾಧಿಪತಿಗಳು, ದೂತರು ಹಾಗೂ ಗುಪ್ತಚರರನ್ನು ಹೊಂದಿದ ಐದು ಶಾಸನ ಸಭೆಗಳು ಚೋಳ ರಾಜರಿಗೆ ನೆರವು ನೀಡುತ್ತಿತ್ತು. ಕೆಲವೊಮ್ಮೆ, ಮಹಾಜನರು, ಬ್ರಾಹ್ಮಣರು, ವೈದ್ಯಕೀಯ ವ್ಯಕ್ತಿಗಳು, ಕುಶಲಕರ್ಮಿಗಳು, ಕುಲೀನರು ಹಾಗೂ ಸೇನಾಧಿಪತಿಗಳೂ, ದೇಶದ ನೇರ ಆಡಳಿತದಲ್ಲಿ ತಮ್ಮನ್ನು ತೊಡಗಿಕೊಳ್ಳುತ್ತಿದ್ದರು.

ಜಿಲ್ಲಾ ಶಾಸನ ಸಭೆಗಳು ಹಾಗೂ ವ್ಯಾಪಾರಿಗಳ ಶ್ರೇಣಿಗಳ ಮೂಲಕ ಸರ್ಕಾರವು ವ್ಯವಹರಿಸುವ ಆಡಳಿತದ ವಿಕೇಂದ್ರೀಕರಣ. ಚೋಳ ಆಡಳಿತದ ಅತ್ಯಂತ ಸ್ವಾರಸ್ಯಕರ ಅಂಶಗಳಲ್ಲಿ ಒಂದು, ಗ್ರಾಮ ಶಾಸನ ಸಭೆಗಳು ಅಗ್ರಹಾರದ ಗ್ರಾಮಗಳಲ್ಲಿ, ಮಂಗಳಮ್‌ಗಳ ನಿಯಂತ್ರಣವನ್ನು ಹೊಂದಿದ ಬ್ರಾಹ್ಮಣರಿದ್ದರು.ವಿಸ್ತಾರವಾದ ಕ್ರಮಗಳ ಮೂಲಕ ನಿಯಂತ್ರಿತವಾದ ತೋಟ, ವಿಭಾಗ, ಕ್ಷೇತ್ರ, ಚಿನ್ನ, ಕೆರೆ, ಇತ್ಯಾದಿಗಳ ಮೇಲ್ವಿಚಾರಣೆ ಇರುವ ಹಲವಾರು ಸಮಿತಿಗಳಿಗೆ ಮಹಾಜನ ಶಾಸನ ಸಭೆಗಳು ಆಡಳಿತದ ಅಧಿಕಾರವನ್ನು ವಹಿಸುತ್ತಿದ್ದವು. ಸರಿಯಾದ ಅರ್ಹತೆ ಹಾಗೂ ವೇದಗಳ ಜ್ಞಾನವು ಇದರ ಸದಸ್ಯತ್ವವನ್ನು ಪಡೆದುಕೊಳ್ಳಲು ಅತ್ಯಗತ್ಯವಾಗಿತ್ತು. ಗಣಪೆರುಮಕ್ಕಳ್, ನ್ಯಾಯಾಧಿಕಾರಿಯ ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿದರೆ, ಅಂಜಸ್ಥಳ ಸಭೈ, ಕೋವಿಲ್‌ಮುಂಜನ್ ಹಾಗೂ ಭಟ್ಟರ್ ಎಂಬ ಸ್ಥಾನಗಳು, ಗ್ರಾಮಗಳ ಆಡಳಿತದ ಮೇಲ್ವಿಚಾರಣೆಯ ಸಂಬಂಧವನ್ನು ಹೊಂದಿದ್ದವು.

## ಹೊಯ್ಸಳ ಹಾಗೂ ವಿಜಯನಗರ ಅರಸರ ಅಡಿಯಲ್ಲಿ

ಹಿಂದಿನ ಅರಸರ ಆಳ್ವಿಕೆಗಿಂತ, ಹೊಯ್ಸಳರ ಆಡಳಿತದಲ್ಲಿ ಅಷ್ಟಾಗಿ ಬದಲಾವಣೆ ಇರಲಿಲ್ಲ. ರಾಜನನ್ನು ಕುರಿತಾಗಿ 'ಶಿಷ್ಟ ರಕ್ಷಣೆ ಹಾಗೂ ದುಷ್ಟರ ನಿಯಂತ್ರಣ' ಎಂದು ಅವರ ಶಾಸನಗಳು ಹೇಳಿವೆ.ಕಾಲದಿಂದ ಕಾಲಕ್ಕೆ ಬದಲಾಗುವ ಮಂತ್ರಿಗಳ ಸಂಖ್ಯೆಯು ಮೂಲತಃ ರಾಜನಿಗೆ ಆಡಳಿತದಲ್ಲಿ ನೆರವು ನೀಡುತ್ತಿದ್ದವು. ೧೩ನೆಯ ಶತಮಾನದ ವೇಳೆಗೆ ಮಂತ್ರಿಗಳ ಗುಂಪು ಎಷ್ಟು ಬೆಳೆದಿತ್ತೆಂದರೆ, ಎಲ್ಲ ವಿಷಯಗಳ ಬಗ್ಗೆಯೂ ಎಲ್ಲರನ್ನೂ ಕುರಿತಾಗಿ ಸಲಹೆ ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ.ರಾಜನು ಎಲ್ಲ ವಿಷಯಗಳನ್ನೂ ಮಂತ್ರಿಗಳಿಗೆ ವರ್ಗಾಯಿಸುತ್ತಿದ್ದರೂ

ಅಂತಿಮ ನಿರ್ಧಾರವು ರಾಜನದ್ದಾಗಿದ್ದು, ಆತನ ಆದೇಶಗಳನ್ನು ಮಂತ್ರಿಗಳು ಜಾರಿಗೆ ತರಬೇಕಿತ್ತು.ಸಂಧಿವಿಗ್ರಹಿಯು ವಿದೇಶೀ ವ್ಯವಹಾರಗಳ ಮಂತ್ರಿಯಾಗಿದ್ದರೆ, ಎಲ್ಲ ಇಲಾಖೆಗಳ ಮೇಲ್ವಿಚಾರಣೆಯ ಅಧಿಕಾರವನ್ನು ಹೊತ್ತ ಅಧಿಕಾರಿಯು ಸರ್ವಾಧಿಕಾರಿ ಆಗಿದ್ದನು. ಬಾಹತ್ತರನೀಯೋಗಾಧಿಪತಿಯು ೭೨ ಇಲಾಖೆಗಳ ಮುಖ್ಯಸ್ಥನಾಗಿದ್ದ ಅಧಿಕಾರಿ ಹಾಗೂ ಮಹಾಭಂಡಾರಿಯು ಹಿರಿಯ ಖಜಾಂಚಿಯಾಗಿದ್ದನು.ಇವರೆಲ್ಲರೂ ಮಂತ್ರಿಮಂಡಲದ ಸದಸ್ಯರು.ರಾಜನ ಪರಮವಿಶ್ವಾಸಿ ಅಥವಾ ಆಪ್ತ ಕಾರ್ಯದರ್ಶಿ ಹಾಗೂ ಮಹಾಪಸಾಯಿತ ಅಥವಾ ವಸ್ತ್ರಗಳ ಮಂತ್ರಿಯು ಇತರ ಹಿರಿಯ ಅಧಿಕಾರಿಗಳಾಗಿದ್ದರು.ಕೆಲವು ಹುದ್ದೆಗಳು ಅನುವಂಶಿಕವಾಗಿದ್ದು, ಅದನ್ನು ಅನ್ವಯಾಗತ ಪ್ರಧಾನ ಕುಟುಂಬಗಳು ಪಡೆಯುತ್ತಿದ್ದವು. ಮಂತ್ರಿಗಳು ಸೇನಾ ಹುದ್ದೆಯನ್ನೂ ಹೊಂದಿದ್ದರಿಂದ, ಅವರನ್ನು ದಂಡನಾಯಕರು ಎಂದೂ ಕರೆಯಲಾಗುತ್ತಿತ್ತು. ರಾಜ್ಯಪಾಲರನ್ನು ವರ್ಗಾವಣೆ ಮಾಡುವ ಸಾಧ್ಯತೆ ಇದ್ದು ಆಡಳಿತವು ಅತ್ಯಂತ ಕೇಂದ್ರೀಕೃತವಾಗಿತ್ತು. ಗರುಡರು ಎಂಬ ನಿಷ್ಠಾವಂತ ಅಂಗರಕ್ಷಕರ ಗುಂಪು ರಾಜನ ರಕ್ಷಣೆಯನ್ನು ಮಾಡುತ್ತಿತ್ತು; ಅವರು ರಾಜನು ಮಡಿದಾಗ, ಆತ್ಮಾರ್ಪಣೆ ಮಾಡಿಕೊಳ್ಳುವಷ್ಟು ನಿಷ್ಠಾವಂತರಾಗಿದ್ದರು!

ರಾಣಿಯರು ಹಾಗೂ ರಾಜಕುಮಾರರೂ ಸಹ, ಆಡಳಿತದಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದರು. ಉದಾಹರಣೆಗೆ ದೀರ್ಘಾವಧಿವರೆಗೂ ಬೆಳ್ವೊಲದಲ್ಲಿ ಬಲ್ಲಾಳನು ತಂಗಿದ್ದಾಗ, ಆತನ ರಾಣಿಯಾದ ಉಮಾದೇವಿಯು ದ್ವಾರಸಮುದ್ರದ ಆಡಳಿತ ಉಸ್ತುವಾರಿಯನ್ನು ವಹಿಸಿಕೊಂಡಿದ್ದಳು. ರಾಜನ ಮಂತ್ರಿಗಳ ಪೈಕಿ, ನ್ಯಾಯ ಮಂತ್ರಿ ಅಥವಾ ಧರ್ಮಾಧಿಕಾರಿಯೂ ಇದ್ದು, ಈ ರೀತಿಯ ಅಧಿಕಾರಿಗಳು ಪ್ರಾಂತಗಳಲ್ಲೂ ಇದ್ದರು. ಅವರು ಅಪರಾಧ ಹಾಗೂ ಪೌರ ನ್ಯಾಯದ ತೀರ್ಪುಗಳನ್ನು ನೀಡಿದರೂ, ರಾಜನೇ ಅಂತಿಮ ಮೊರೆಯ ನ್ಯಾಯಾಲಯವಾಗಿದ್ದನು. ಐದು ಉಗ್ರ ಪರೀಕ್ಷೆಗಳು ಅಥವಾ ಪಂಚದಿವ್ಯಗಳು ವಿಚಾರಣೆ ಸಮಯದಲ್ಲಿ ರೂಢಿಯಲ್ಲಿದ್ದು, ಪ್ರಸಾದದ ಆಹಾರ ಅಥವಾ ತೇಯ್ದ ಗಂಧವನ್ನು (ಪ್ರಸಾದ) ಹಿಡಿದು, ತಮ್ಮ ವ್ಯಾಜ್ಯಗಳ ಪರವಾಗಿ ಶಪಥ ಕೈಗೊಳ್ಳಬೇಕಿತ್ತು.

ಹೊಯ್ಸಳರ ಅಡಿಯಲ್ಲಿ ನಾಡು ಹಾಗೂ ವಿಷಯಗಳೆಂಬ ಆಡಳಿತ ವಿಭಾಗಗಳು ಇದ್ದವೆಂದು ಶಾಸನಗಳು ತಿಳಿಸುತ್ತವೆ.ನಾಡು ವಿಭಾಗವನ್ನು ಸೇನಾ ಅಧಿಕಾರಿಯಾದ ದಂಡನಾಯಕನು ನೋಡಿಕೊಳ್ಳುತ್ತಿದ್ದನು.ಅವನಿಗೆ ನೆರವು ನೀಡಲು ಮಹಾಪ್ರಧಾನ, ಭಂಡಾರಿ (ಖಜಾಂಚಿ), ಸೇನಬೋವ(ಗುಮಾಸ್ತ)ರಿದ್ದು, ಹೆಗ್ಗಡೆಗಳು ಎಂಬ ಹಲವಾರು ಕಿರಿಯ ಅಧಿಕಾರಿಗಳು, ಬಹುಶಃ ನಾಡು ಎಂಬ ಸಣ್ಣ ಘಟಕಗಳ ಉಸ್ತುವಾರಿಯನ್ನು ವಹಿಸಿದ್ದರು. ಚಂಗಾಲ್ವರು, ಕೊಂಗಾಲ್ವರು, ಬೆಳಗುತ್ತಿಯ ಸಿಂಧರು, ಸಾಂತರರು ಹಾಗೂ ಅಳುಪರೆಂಬ ಸಾಮಂತ ರಾಜ ಮನೆತನದವರನ್ನು ಮುಂದುವರಿಯಲು ಅನುಮತಿ ನೀಡಲಾಗಿತ್ತು, ಆದರೆ ಯಾವುದೇ ನೂತನ ಸಾಮಂತ ಮನೆತನಗಳು ಅಸ್ತಿತ್ವಕ್ಕೆ ಬರಲಿಲ್ಲ.ರಾಜ್ಯ ವ್ಯವಸ್ಥೆಯು ಅತ್ಯಂತ ಕೇಂದ್ರೀಕೃತವಾಗಿತ್ತು.

ಒಕ್ಕಲು, ಹಲರು, ಪ್ರಜಾಸಮುದಾಯ, ಮೊದಲಾದ ಪಟ್ಟಣ ಹಾಗೂ ಗ್ರಾಮ ಶಾಸನ ಸಭೆಗಳು ಮುಂದುವರಿಯಲು ಅನುಮತಿ ನೀಡಲಾಗಿತ್ತು ಎಂದು ಶಾಸನಗಳಲ್ಲಿ ಉಲ್ಲೇಖವಿದೆ. ಕೆಲವು ಗ್ರಾಮಗಳಲ್ಲಿ ಹಿಟುಗಳು ಅಥವಾ ಸಮಯ ಎಂಬ ಕಾರ್ಯನಿರ್ವಾಹಕರು ಇದ್ದರು. ಪ್ರತಿಯೊಂದು ಹಿಟು ಗ್ರಾಮದ ಜಾತಿಯ ಪ್ರತಿನಿಧಿಯಾಗಿದ್ದು, ಅವುಗಳ ಸಂಖ್ಯೆಗಳಲ್ಲಿ ವ್ಯತ್ಯಾಸವಿರುತ್ತಿತ್ತು. ಕೆಲವು ಗ್ರಾಮಗಳಲ್ಲಿ ಎಂಟು ಹಿಟ್ಟುಗಳು ಎಂಟು ಜಾತಿಗಳನ್ನು ಪ್ರತಿನಿಧಿಸಿದರೆ, ಇತರರಲ್ಲಿ ೧೮ ಹಿಟ್ಟುಗಳು ಇದ್ದವು. ದಾಖಲೆಗಳಲ್ಲಿ ಗೌಡ (ಗವುಂಡ) ಅಥವಾ ಗ್ರಾಮದ ಮುಖ್ಯಸ್ಥನನ್ನು ಕುರಿತಾಗಿ ಹೇಳಲಾಗಿದೆ. ಬ್ರಾಹ್ಮಣ ವಿದ್ವಾಂಸರ ವಸಾಹತುಗಳಾದ ಅಗ್ರಹಾರಗಳಲ್ಲಿ, ಕುಟುಂಬದ ಮುಖ್ಯಸ್ಥರಾದ ಮಹಾಜನರ ಶಾಸನ ಸಭೆಗಳು ಇದ್ದರೆ, ಪಟ್ಟಣಗಳಲ್ಲಿ ವ್ಯಾಪಾರಿಗಳ ವೃತ್ತಿ ಸಂಘಗಳು ಇದ್ದು, ಅದರ ಮುಖ್ಯಸ್ಥರನ್ನು ಮಹಾವಡ್ಡ ವ್ಯವಹಾರಿಗಳು ಎಂದು ಕರೆಯಲಾಗುತ್ತಿತ್ತು. ಅಕ್ಕಸಾಲಿಗರಂತಹ ಕುಶಲಕರ್ಮಿಗಳಿಗೂ ತಮ್ಮದೇ ಆದ ವೃತ್ತಿಸಂಘಗಳಿದ್ದು, ಅವುಗಳನ್ನು ಪಾಂಚಾಲರು ಎಂದು ಕರೆಯುತ್ತಿದ್ದರು.

ಭೂಕಂದಾಯವೂ ರಾಜಾದಾಯದ ಮುಖ್ಯ ಮೂಲವಾಗಿತ್ತು. ಕಡತವೆಂಬ ಕೇಂದ್ರ ದಾಖಲೆಯನ್ನು ನಿರ್ವಹಿಸಲಾಗುತ್ತಿದ್ದು - ಅದರಲ್ಲಿ ಸಿದ್ಧಾಯವೆಂಬ ಭೂಕಂದಾಯವನ್ನು ಪಟ್ಟಿ ಮಾಡಲಾಗಿತ್ತು. ಇದರಲ್ಲಿ ಕುಲ ಅಥವಾ ಮೂಲ ಮಾಪನ ಹಾಗೂ ಹಲವಾರು ಕರಗಳನ್ನು ಸೇರ್ಪಡೆ ಮಾಡಲಾಗಿದೆ.ಕುಲಕ್ಕೆ ಅನುಗಣವಾಗಿ ಕರಗಳನ್ನು ನಿಗಧಿಪಡಿಸಿ ಸಂಗ್ರಹಣೆ ಮಾಡಲಾಗುತ್ತಿತ್ತು. ಮದುವೆಯ ಕರ, ರಥ, ಸಾರೋಟು , ಪಳಗಿಸಿದ ಪ್ರಾಣಿ, ವೀಳ್ಯದೆಲೆ, ತುಪ್ಪ, ವಸ್ತ್ರ, ನೂಲು, ಇತ್ಯಾದಿ ಮೇಲಿನ ಕರಗಳ ಜೊತೆಗೆ, ವೃತ್ತಿ ಕರಗಳನ್ನು ವಿಧಿಸಲಾಗುತ್ತಿತ್ತು ಎಂದು ದಾಖಲೆಗಳಲ್ಲಿ ಹೆಸರಿಸಲಾಗಿದೆ.ದನಗಳ ಮೇಲಿನ ಕರವನ್ನು ಬಾಲವನ ಎಂದು ಕರೆಯಲಾಗುತ್ತಿತ್ತು. ಬೆಂಕಿಗೂಡಿನ (ಹೊಗದೆರೆ) ಮನೆಗಳು, ಅಂಗಡಿಗಳು, ದನಗಳ ಕೊಟ್ಟಿಗೆ, ಕಬ್ಬಿನ, ಕುರಿ ಹಿಂಡು, ಇತ್ಯಾದಿಗಳಿಗೂ ಕರಗಳನ್ನು ಸಂಗ್ರಹಿಸಲಾಗುತ್ತಿತ್ತು. ರಾಜರ ಆದಾಯದ ಮತ್ತೊಂದು ಪ್ರಮುಖ ಮೂಲವೆಂದರೆ ದಂಡಗಳಾಗಿದ್ದವು.

ಗದ್ಯಾಣ ಅಥವಾ ಹೊನ್ನುಗಳೆಂಬ ಚಿನ್ನದ ನಾಣ್ಯಗಳನ್ನು ಹೊಯ್ಸಳರು ಹೊರಡಿಸಿದ್ದರು; ಅವು ೭೨ ಗುಲಗಂಜಿ ತೂಕವಿತ್ತು, ಪಣ ಅಥವಾ ಹಣವು ಗದ್ಯಾಣದ ಹತ್ತನೆಯ ಒಂದು ಭಾಗವಾಗಿದ್ದರೆ, ಪಣವು ಹಾಗದ ನಾಲ್ಕನೆಯ ಒಂದು ಭಾಗ ಹಾಗೂ ಹಾಗದ ನಾಲ್ಕನೆಯ ಒಂದು ಭಾಗವು ವೀಸವಾಗಿತ್ತು.ಬೇಳೆ ಅಥವಾ ಹಣಿ ಎಂಬ ನಾಣ್ಯಗಳೂ ಇದ್ದವು.

ಹೊಯ್ಸಳರು, ಸೇವುಣರು, ಕಾಕತೀಯರು ಹಾಗೂ ಪಾಂಡ್ಯರ ಆಡಳಿತ ಸಂಪ್ರದಾಯಗಳು ವಿಜಯನಗರದ ಸಾಮ್ರಾಜ್ಯಕ್ಕೆ ಬಳುವಳಿಯಾಗಿ ಬಂತು.ಬದಲಾದ ಕಾಲದ ಅಗತ್ಯಗಳಿಗೆ ಅನುಗಣವಾಗಿ, ಸೂಕ್ತ ಬದಲಾವಣೆಗಳನ್ನು ಪರಿಚಯಿಸಿ, ಹಳೆಯ ಆಡಳಿತ ಸಂಸ್ಥೆಗಳ ಉಪಯೋಗವನ್ನು ಮಾಡಿಕೊಂಡರು.ಸಾಮ್ರಾಜ್ಯದ ಆಡಳಿತವನ್ನು ಯುದ್ಧಸನ್ನದ್ಧ ರಾಜ್ಯಕ್ಕೆ ಅನುಗುಣವಾಗಿ ವ್ಯವಸ್ಥಿತಗೊಳಿಸಲಾಗಿತ್ತು.“ಮೂಲಭೂತವಾಗಿ, ವಿಜಯನಗರವು ಸೇನಾ ರಾಜ್ಯವಾಗಿತ್ತು.ಮುಸಲ್ಮಾನರ ವಿರುದ್ಧ ಬಲವಾದ ವಿರೋಧವನ್ನು ವ್ಯಕ್ತಪಡಿಸುವಂತಹ ಮೂಲ





ಮಹಾನವಮಿ ದಿಬ್ಬ, ಹಂಪಿ, ಬಳ್ಳಾರಿ ಜಿಲ್ಲೆ

ಉದ್ದೇಶವನ್ನು ವ್ಯವಸ್ಥೆ ಹಾಗೂ ಸಂಯೋಜನೆಗಳು ವ್ಯಕ್ತಪಡಿಸುತ್ತಿದ್ದವು," ಎಂದು ವಿಜಯನಗರ ಕಾಲದ ಸಮಾಜವನ್ನು ಕುರಿತಾಗಿ ಡಾ.ಕೆ.ಎಮ್.ಪಣಿಕ್ಕರ್ ಬರೆದಿದ್ದಾರೆ.

ಹಿಂದೂ ರಾಜತ್ವ ಹಾಗೂ ರಾಜ್ಯದ ಆಡಳಿತದ ತತ್ವವನ್ನು, ವಿಜಯನಗರದ ಅರಸರು ಚೆನ್ನಾಗಿ ಅರಿತು, ಅನುಸರಿಸುತ್ತಿದ್ದರು. ದಸರಾ ವೈಭವದಲ್ಲಿ ಪ್ರದರ್ಶಿಸುವಂತೆ, ರಾಜನನ್ನು 'ಭೂಮಿಯ ಮೇಲಿನ ದೇವರು' ಎಂದು ಸಾಬೀತುಪಡಿಸಲು ಎಲ್ಲ ಯತ್ನಗಳನ್ನೂ ಮಾಡಲಾಗುತ್ತಿತ್ತು. ರಾಜ್ಯದ ಏಳು ಮುಖ್ಯ ಅಂಗಗಳ ಪೈಕಿ ರಾಜನು ಅತ್ಯಂತ ಪ್ರಮುಖ ಅಂಗವಾಗಿದ್ದು, ಆತನ ಮುಖ್ಯ ಕ್ರಿಯೆಯು ಸರ್ವಾಧಿಕಾರಿ ರಾಜನಾಗಿರದೆ, ಪದ್ಧತಿ ಹಾಗೂ ಆಚಾರಗಳನ್ನು ಜಾರಿಗೆ ತರುವವನಾಗಿದ್ದನು. ರಾಜ್ಯದ ಎರಡನೆಯ ಅಂಗವಾದ ಮಂತ್ರಿಗಳ ನೆರವು ಹಾಗೂ ಸಲಹೆಯೊಂದಿಗೆ, ರಾಜನು ಆಡಳಿತವನ್ನು ನಿರ್ವಹಿಸುತ್ತಿದ್ದನು.ರಾಜನಿಗೆ ಅನೇಕ ಮಂತ್ರಿಗಳಿದ್ದು ಪ್ರಧಾನ ಮಂತ್ರಿಯನ್ನು ಮಹಾಪ್ರಧಾನ ಅಥವಾ ಶ್ರೀಪ್ರಧಾನನೆಂದು ಕರೆಯುತ್ತಿದ್ದರು.ಪ್ರಧಾನ ಮಂತ್ರಿ ಇತರ ಮಂತ್ರಿಗಳು ಸೇನಾಧಿಕಾರಿಗಳೂ ಆಗಿದ್ದರು; ದಂಡನಾಯಕ ಅಥವಾ ದಂಡನಾಥ ಅಥವಾ ದಣ್ಣನಾಯಕನೆನ್ನುವ ಅವರ ಹೆಸರಿಗೆ ಅಳವಡಿಸಿದ ಬಿರುದುಗಳು ಇದನ್ನು ಸೂಚಿಸುತ್ತದೆ. ಒಂದನೆಯ ಬುಕ್ಕ ಹಾಗೂ ಎರಡನೆಯ ಹರಿಹರನ ಅಡಿಯಲ್ಲಿ ಮುದ್ದ-ದಂಡನಾಥನು ಮಹಾಪ್ರಧಾನನಾಗಿದ್ದರೆ ಕೃಷ್ಣದೇವರಾಯನ ಅಡಿಯಲ್ಲಿ ಸಾಳುವ ತಿಮ್ಮರಾಯನು ಈ ಹುದ್ದೆಯನ್ನು ಅಲಂಕರಿಸಿದ್ದನು.

ಮಂತ್ರಿಗಳೆಲ್ಲರೂ ಸೇನಾಧಿಕಾರಿಗಳಾಗಿದ್ದರು ಎಂಬ ವಾಸ್ತವವು, ವಿಜಯನಗರವು ಮೂಲಭೂತವಾಗಿ ಸೇನಾ ರಾಜ್ಯವಾಗಿತ್ತು ಎಂಬ ಹೇಳಿಕೆಗೆ ಪುಷ್ಟಿಯನ್ನು ನೀಡುತ್ತದೆ.ಜೊತೆಗೆ, ವಿಜಯನಗರದ ಮಂತ್ರಿಗಳು ಶಾಸ್ತ್ರಗಳಲ್ಲಿ ನಿಪುಣರೂ ಆಗಬೇಕೆಂದು ಅಪೇಕ್ಷಿಸಲಾಗುತ್ತಿತ್ತು.ಕುರುಬರು, ಒಕ್ಕಲಿಗರು ಹಾಗೂ ಬೇಡರೂ ಸೇರಿದಂತೆ, ಎಲ್ಲ ಜಾತಿಯ ಸಮರ್ಥ ಸೇನಾ ಸದಸ್ಯರು ಸೇನಾಧಿಕಾರಿಗಳಾಗಿ ಹಾಗೂ ಪಾಳೇಗಾರರಾಗಿಯೂ ಬಡ್ತಿಯನ್ನು ಪಡೆಯುತ್ತಿದ್ದರು.

ಅಬ್ದುರ್ ರಜ್ಜಾಕ್ ಹಾಗೂ ನೂನಿಜ್‌ನಂತಹ ವಿದೇಶೀ ಪ್ರವಾಸಿಗರು, ಶಾಸನಾಂಗದ ಅಸ್ತಿತ್ವವನ್ನು ಕುರಿತಾಗಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಬ್ದುರ್ ರಜ್ಜಾಕ್‌ನ ಪ್ರಕಾರ, ಸಾಮ್ರಾಜ್ಯಕ್ಕೆ ಭೇಟಿ ನೀಡುವವರಿಗೆಂದೇ, ಅರಸನ ಅರಮನೆಯ ಬಲಬದಿಯಲ್ಲಿ ದಿವಾನ್‌ಖಾನ ಎಂದು ಕರೆಯಲ್ಪಡುವ ೪೦-ಕಂಬಗಳ ಹಜಾರವಿತ್ತು. ೩೦ ಗಜ ಉದ್ದ ಹಾಗೂ ಆರು ಗಜ ಅಗಲದ ವೀಕ್ಷಣಾ ಸ್ಥಳದ ಮೇಲೆ, ದಾಖಲೆಗಳನ್ನು ಇರಿಸಿ, ಲಿಪಿಕಾರರನ್ನು ಕುಳ್ಳಿರಿಸಲಾಗುತ್ತಿತ್ತು.ಅಧಿಕೃತ ಕಾರ್ಯಗಳಿಗೆ ಕಾಗದವನ್ನು ವಿಸ್ತೃತವಾಗಿ ಬಳಸಲಾಗುತ್ತಿತ್ತು. ರಾಜನ ಕಾರ್ಯದರ್ಶಿಗಳ ದಾಖಲೆ ಪುಸ್ತಕಗಳನ್ನು ಕುರಿತಾಗಿ ಮಾತನಾಡುತ್ತ, ರಾಜನ ಉಂಗುರವೊಂದರ ಅಚ್ಚನ್ನು ಮೇಣದಲ್ಲಿ ಒತ್ತಿದ ರಾಜಮುದ್ರೆಯೊಂದಿಗೆ ಆದೇಶಗಳಿಗೆ ಅಧಿಕೃತತೆಯನ್ನು ನೀಡಲಾಗುತ್ತಿತ್ತು ಎಂದು ನೂನಿಜ್ ಬರೆದಿದ್ದಾನೆ.ರಾಜನ ವೈಯಕ್ತಿಕ ಕಾರ್ಯಗಳ ಉಸ್ತುವಾರಿಯನ್ನು ಕಾರ್ಯಕರ್ತ ಅಥವಾ ರಾಯಸಸ್ವಾಮಿ ಎಂದು ಕರೆಯಲ್ಪಡುವ ಮುಖ್ಯ ಕಾರ್ಯದರ್ಶಿಯು ವಹಿಸಿಕೊಂಡಿದ್ದನು. ಕಾರ್ಯದರ್ಶಿಗಳನ್ನು ರಾಯದವರೆಂದು ಕರೆಯಲಾಗುತ್ತಿತ್ತು.

ರಾಜ್ಯದ ಆದಾಯಕ್ಕೆ ಭೂ ಕಂದಾಯವೇ ಪ್ರಮುಖ ಮೂಲವಾಗಿದ್ದು ಭೂಮಿಯ ಒಟ್ಟಾರೆ ಉತ್ಪನ್ನದ ಆಧಾರದ ಮೇಲೆ ಕಂದಾಯವನ್ನು ನಿಗದಿಸಲಾಗುತ್ತಿತ್ತು.ವಾಮನಮುದ್ರೆಯಕಲ್ಲು ಅಥವಾ ಲಿಂಗಮುದ್ರೆಯಕಲ್ಲು ಎಂಬ ಕಲ್ಲುಗಳಿಂದ ಭೂಮಿಯ ಗಡಿಗಳನ್ನು ಗುರುತಿಸಲಾಗುತ್ತಿತ್ತು. ಆದಾಯದ ಇತರ ಮೂಲಗಳ ಪೈಕಿ ಮನೆ ಅಥವಾ ಅಂಗಡಿಗಳ ಮೇಲಿನ ಆಸ್ತಿ ತೆರಿಗೆ, ವೃತ್ತಿ ತೆರಿಗೆ ಜಾತ್ರೆ ಹಾಗೂ ಮಾರುಕಟ್ಟೆಯ ಸ್ಥಳಗಳಲ್ಲಿ ಶೇಖರಣೆ ಮಾಡಿದ ಆಮದು ತೆರಿಗೆಗಳು ಆಗಿದ್ದವು.ಉಪ್ಪಿನ ಮಡಿ ಅಥವಾ ಕೊಪ್ಪರಿಗೆ ಹಾಗೂ ಈಚಲ ಮರಗಳ ಮೇಲೂ ಕರವನ್ನು ವಿಧಿಸಲಾಗುತ್ತಿತ್ತು.ಕ್ರಿ.ಶ.೧೩೮೨ರ ಬೇಲೂರು ಶಾಸನವೊಂದರಲ್ಲಿ, ಸಾಮ್ರಾಜ್ಯದ ೨೬ ನಿರ್ದಿಷ್ಟ ಜಾತ್ರೆಗಳಲ್ಲಿ, ಆಮದು-ರಫ್ತು ಸುಂಕಕ್ಕೆ ಒಳಪಡಿಸಲಾಗಿದ್ದ ಸರಕುಗಳ ಉದ್ದನೆಯ ಪಟ್ಟಿಯನ್ನು ನೀಡಲಾಗಿದೆ.

ರಾಜನು ಚಿನ್ನ, ಬೆಳ್ಳಿ ಹಾಗೂ ತಾಮ್ರದ ನಾಣ್ಯಗಳನ್ನೂ ಹೊರಡಿಸಿದ್ದನು.ಗದ್ಯಾಣ, ವರಾಹ ಅಥವಾ ಹೊನ್ನು ಎನ್ನುವ ಚಿನ್ನದ ನಾಣ್ಯಗಳು ೫೨ ಗುಲಗಂಜಿ ತೂಕವನ್ನು ಹೊಂದಿತ್ತು. ಚಿನ್ನದ ನಾಣ್ಯವಾದ ಪ್ರತಾಪವು ಗದ್ಯಾಣದ ೧/೨ ಭಾಗವಿತ್ತು. ಗದ್ಯಾಣದ ೧/೧೦ ಭಾಗದ ಹಣ, ಹಾಗ, ವೀಸ ಹಾಗೂ ಕಾಸುಗಳು ಇತರ ಕಿರುಮೌಲ್ಯದ ನಾಣ್ಯಗಳಿದ್ದವು.

ಸೈನ್ಯದಲ್ಲಿ ಎರಡು ಭಾಗಗಳಿದ್ದವು – ಇವು ರಾಜನು ನೇರವಾಗಿ ನೇಮಕ ಮಾಡಿಕೊಳ್ಳುತ್ತಿದ್ದ ಶಾಶ್ವತ ಸೈನ್ಯ ಹಾಗೂ ಸಾಮಂತ ಸೈನ್ಯ.ಬಾರ್ಬೋಸಾನ ಪ್ರಕಾರ, ಕೃಷ್ಣದೇವರಾಯನ ಖಾಯಂ ಸೈನ್ಯದಲ್ಲಿ ೯೦೦ ಆನೆಗಳು, ೨೦,೦೦೦ ಕುದುರೆಗಳು ಹಾಗೂ ೧,೦೦,೦೦೦ ಪದಾತಿ ದಳವು ಇತ್ತು.ಯಾತ್ರಿಕನು ಕೇವಲ ರಾಜನ ಸೈನ್ಯಕ್ಕೆ ಮಾತ್ರ ಉಲ್ಲೇಖ ಮಾಡುತ್ತಿದ್ದನು ಎಂದು ತೋರುತ್ತದೆ. ರಾಜನ ಸೈನ್ಯದಲ್ಲಿ ೧ ಲಕ್ಷ ಮಂದಿ ಇದ್ದರೆಂದು ಅಬ್ದುಲ್ ರಜ್ಜಾಕನು ಹೇಳಿದ್ದಾನೆ.ಸೈನ್ಯದಲ್ಲಿ ತೋಪು ಪಡೆಯೂ ಇತ್ತು.ಒಂದು ಶಾಸನದಲ್ಲಿ ಕಾಣುವ ನಾವಿಗದ-ಪ್ರಭು ಎಂಬ ಪದದಿಂದ ನೌಕಾಪಡೆಯೂ ಇತ್ತೆಂದು ತಿಳಿದು ಬರುತ್ತದೆ.ಕೃಷ್ಣದೇವರಾಯನ ಕಾಲದಲ್ಲಿ, ನೌಕಾಪಡೆಯ ಮುಖ್ಯಸ್ಥ ತಿಮ್ಮಯ್ಯನಾಗಿದ್ದ.

ದ್ಯುಆರ್ತೆ ಬಾರ್ಬೋಸನ ಪ್ರಕಾರ, ನರಸಿಂಗ (ವಿಜಯನಗರ) ರಾಜ್ಯದಲ್ಲಿ ಐದು ದೊಡ್ಡ ಪ್ರಾಂತಗಳಿದ್ದು, ಅವುಗಳಿಗೆ ತಮ್ಮದೇ ಆದ ಭಾಷೆ ಇತ್ತೆಂದು ತಿಳಿಸಿದ್ದಾನೆ.ಪುರಾತನ ಇತಿಹಾಸ ಹಾಗೂ ಪುರಾತತ್ವಶಾಸ್ತ್ರದ ಪ್ರೊಫೆಸರ್ ಆದ ಡಾ.ಟಿ.ವಿ.ಮಹಾಲಿಂಗಮ್‌ರವರು ಒಂಭತ್ತು ಪ್ರಾಂತಗಳ ಪಟ್ಟಿಯನ್ನು ಮಾಡಿದ್ದಾರೆ.ಪ್ರಾಂತಗಳನ್ನು ರಾಜ್ಯ ಅಥವಾ ಮಂಡಲಗಳೆಂದು ಕರೆಯಲಾಗುತ್ತಿದ್ದು ಅವುಗಳ ಗಾತ್ರದಲ್ಲಿ ವ್ಯತ್ಯಾಸವಿರುತ್ತಿತ್ತು.ಪ್ರತಿಯೊಂದು ರಾಜ್ಯವೂ ಹೊಣೆಗಾರಿಕೆ ಹೊತ್ತ ಅಧಿಕಾರಿಯಿಂದ ಆಳಲ್ಪಟ್ಟಿತ್ತು ಅಥವಾ ಒಮ್ಮೊಮ್ಮೆ, ಸ್ವತಃ ರಾಜಮನೆತನದ ಸದಸ್ಯರೇ ಅದನ್ನು ಆಳುತ್ತಿದ್ದರು.ಅನೇಕ ಸಲ, ಪ್ರಾಂತೀಯ ರಾಜ್ಯಪಾಲರ ಹುದ್ದೆಗಳು ಅನುವಂಶಿಕವಾದರೂ, ಅವು ವರ್ಗಾವಣೆಗೂ ಒಳಪಡಬೇಕಾಗಿತ್ತು.

ಸಾಮಾಜಿಕ, ಆಡಳಿತಾತ್ಮಕ ಅಥವಾ ನ್ಯಾಯಾಂಗ ಯಾವುದೇ ಸ್ಥಳೀಯ ವಿಷಯದ ಉಸ್ತುವಾರಿ ವಹಿಸುವುದನ್ನು ಬಹಳ ಕಾಲದಿಂದ ಅಸ್ತಿತ್ವದಲ್ಲಿದ್ದ ಸ್ಥಳೀಯ ಶಾಸನಸಭೆಗಳು ಮುಂದುವರಿಸಿದವು. ಕೇವಲ ವಿಶೇಷ ಪ್ರಾಮುಖ್ಯತೆ ಪಡೆದ ವಿಷಯಗಳಲ್ಲಿ ಮಾತ್ರ, ಸಾಮ್ರಾಜ್ಯಶಾಹಿ ಅಧಿಕಾರಿಗಳು ಮಧ್ಯಸ್ಥಿಕೆ ವಹಿಸಿಕೊಳ್ಳುತ್ತಿದ್ದರು. ಗ್ರಾಮಗಳಲ್ಲಿ ಗೌಡ ಅಥವಾ ಮುಖ್ಯಸ್ಥ, ಒಬ್ಬ ಸೇನಬೋವ ಅಥವಾ ಕರಣಿಕ ಅಥವಾ ಕರಣಮು (ಲೆಕ್ಕಿಗ) ಹಾಗೂ ಕಾವಲು ಅಥವಾ ತಲಾರ (ಕಾವಲುಗಾರ) ಇರುತ್ತಿದ್ದರು.ತಮ್ಮ ಕಾರ್ಯಗಳನ್ನು ಪೂರೈಸುವ ಹಿರಿಯರ ಗ್ರಾಮ ಸಭೆಯೊಂದಿಗೆ, ಮುಖ್ಯ ಪಟ್ಟಣಗಳಲ್ಲಿ ಸಾಮ್ರಾಜ್ಯಶಾಹಿ ಆಡಳಿತವರ್ಗದ ಅಧಿಕಾರಿಯಾದ ಅಧಿಕಾರಿಗಳು ಇರುತ್ತಿದ್ದರು.ಜಲ ಮೂಲಗಳ ನಿರ್ವಹಣೆ, ನೀರಾವರಿ ಸೌಕರ್ಯ ಹಾಗೂ ದೇವಾಲಯಗಳಲ್ಲಿನ ಧಾರ್ಮಿಕ ಸೇವೆಗಳಂತಹ ಸಾರ್ವಜನಿಕ ವಿಷಯಗಳನ್ನು ಅವರು ನಿಯಂತ್ರಿಸುತ್ತಿದ್ದು, ಜಾತಿಯ ಶಾಸನಸಭೆಗಳು ಹಾಗೂ ವೃತ್ತಿಪರ ವೃತ್ತಿಸಂಘಗಳೂ ಮುಂದುವರಿದವು.



Coins of Vijayanagara

ಶಾಸನಗಳಿಂದ ಪಡೆದ ಮಾಹಿತಿಯ ಅಧಾರದ ಮೇಲೆ, ಸೇನಾ ವ್ಯವಸ್ಥೆಯು ಸಾಮಂತರ ಸಂಘಟನೆಯನ್ನು ಪಡೆದಿದ್ದು, ರಾಜನ ವೈಯಕ್ತಿಕ ಪಡೆಗಳು ಅಥವಾ ಅಂಗರಕ್ಷಕರು ಯುದ್ಧ ಮತ್ತು ದಂಗೆಗಳ ಸಮಯದಲ್ಲಿ ರಾಜ್ಯಪಾಲರು ಸರಬರಾಜು ಮಾಡುತ್ತಿದ್ದ ತುಕಡಿಗಳು, ಜೊತೆಗೆ ಸೇನಾ ದಂಡಯಾತ್ರೆಗಳು ಅಥವಾ ರಕ್ಷಣೆಗಾಗಿ ಆಗಾಗ ಸಿದ್ಧಪಡಿಸಲಾಗುತ್ತಿದ್ದ ಸಂಬಳದ ಸಿಪಾಯಿಗಳನ್ನೂ ಒಳಗೊಂಡಿದ್ದವು. ರಥಗಳು ಸೇರ್ಪಡೆಯಾದ ಸಾಂಪ್ರದಾಯಿಕ ಚದುರಂಗ–ಬಲದ ಉಲ್ಲೇಖಗಳು ಇದ್ದರೂ, ರಥಗಳು ಸೇನಾ ಆಡಳಿತ ಅಥವಾ ಸಂಸ್ಥೆಯ ಅವಿಭಾಜ್ಯ ಅಂಗವಾಗಿ ಇತ್ತೆಂಬುದು ಬಹಳಷ್ಟು ಸಂದೇಹಾಸ್ಪದವಾಗಿದೆ. ಯುದ್ಧಗಳು ನಡೆಯುತ್ತಿರುವ ರೀತಿಯನ್ನು ತೋರಿಸುವ ಯುದ್ಧದ ದೃಶ್ಯಗಳನ್ನು ಹೊಂದಿದ ಶಿಲ್ಪಗಳುಳ್ಳ ಹೊಯ್ಸಳ ದೇವಾಲಯಗಳ ಫ್ರೀಜ್‌ಗಳ (ಕಂಬದ ಮೇಲ್ಗಡೆಯ ವರಸೆಯಲ್ಲಿ ಬೋದಿಗೆಯ ಮೇಲಿನ ತೊಲೆಗೂ, ಕಾರ್ನೀಸ್‌ಗೂ ನಡುವೆ ಇರುವ ಅಗಲವಾದ ಅಲಂಕಾರ ಪಟ್ಟಿ) ಅಧ್ಯಯನ ಮಾಡಿದಾಗ, ಬಂಡಿಯ ಮೇಲ್ಭಾಗಕ್ಕೆ ಕೀಲುಜೋಡಣೆಯಾದ ದುಂಡು ಚಕ್ರಗಳು  ಹಾಗೂ ಅಚ್ಚುಗಂಬಿಗಳುಳ್ಳ, ಕುದುರೆಗಳಿಂದ ಎಳೆಯಲ್ಪಟ್ಟ ಎರಡು ರೀತಿಯ ತೆರೆದ ಬಂಡಿಗಳು ಇದ್ದವೆಂದು ಸ್ಪಷ್ಟವಾಗುತ್ತದೆ.

ಅಶ್ವಪಡೆಯು ರಕ್ಷಣೆ ಹಾಗೂ ಪ್ರಹಾರಗಳ ಎರಡೂ ಉದ್ದೇಶಗಳಿಗೆ ಬಳಸಲ್ಪಡುತ್ತಿದ್ದ ಸೈನ್ಯದ ಮುಖ್ಯ ಘಟಕವಾಗಿತ್ತೆಂದು ತೋರುತ್ತದೆ.ವಿಷ್ಣುವರ್ಧನನ ಕಾಲದಲ್ಲಿ ಆಮದಾದ ಕುದುರೆಗಳು, ಅದರಲ್ಲೂ ಕಾಂಭೋಜದಿಂದ ಬಂದ ಕುದುರೆಗಳನ್ನು ಈ ಪಡೆಯು ಹೊಂದಿತ್ತು.ಪಥಸಂಚಲನ ಹಾಗೂ ಸೇನಾ ಕಾರ್ಯಾಚರಣೆಗಳು ಹಾಗೂ ಸಹನೆ, ಸ್ಥೈರಣೆ ಹಾಗೂ ಧೈರ್ಯಗಳ ತರಬೇತಿಯನ್ನು ನೀಡುವ ಅಶ್ವಶಾಲೆಗಳು ಇದ್ದವು. ಕ್ರಿ.ಶ.೧೧೪೦ರಲ್ಲಿ ಕಿರೀಟ ಸವಾರಿ ಶಾಲೆಯ ಮೇಲ್ವಿಚಾರಣೆ ಮಾಡಲು, ಬೊಮ್ಮಲಾದೇವಿಯು ಅನಂತಪಾಲನನ್ನು ನೇಮಿಸಿದ್ದಳು.ಕುದುರೆಗಳ ಸ್ವಾಮಿಗಳನ್ನು ಪಲ್ಲಿಕಾರ, ಅಶ್ವಾಧ್ಯಕ್ಷ ಹಾಗೂ ತುರಗಸಹಿನಿ ಎಂದು ಕರೆಯುತ್ತಿದ್ದರು.ಹಳೇಬೀಡಿನ ಕೇದಾರೇಶ್ವರ ದೇವಾಲಯದ ಗೋಡೆಗಳ ಮೇಲಿನ ಶಿಲ್ಪಗಳು ಅಶ್ವದಳದವರು ಹೃದಯ ಕವಚ ಹಾಗೂ ಚಪ್ಪಟೆಯಾದ ಶಿರಸ್ತ್ರಾಣಗಳನ್ನು ಧರಿಸಿ, ಈಟಿ, ಕಠಾರಿ, ಖಡ್ಗ ಹಾಗೂ ಗುರಾಣಿಗಳನ್ನು ಯುದ್ಧಭೂಮಿಯಲ್ಲಿ ಬಳಸುತ್ತಿದ್ದರೆಂದು ತೋರಿಸುತ್ತದೆ.

ಖಾಯಂ ಸೈನ್ಯದ ಪದಾತಿ ಸೈನಿಕರು ಹಾಗೂ ಸಂಬಳದ ಸಿಪಾಯಿಗಳು, ಖಡ್ಗ, ಈಟಿ, ಬಿಲ್ಲು–ಬಾಣಗಳನ್ನು ಆಕ್ರಮಣದ ಸಲುವಾಗಿ ಬಳಸುತ್ತಿದ್ದರು ತಲೆಕಾಪು, ಉಕ್ಕಿನ ದೇಹಕವಚ ಹಾಗೂ ಚರ್ಮದ ಮೇಲಂಗಿಗಳನ್ನು ಆತ್ಮರಕ್ಷಣೆಗಾಗಿ ಬಳಸುತ್ತಿದ್ದು ಒಂದು ರೀತಿಯ ಬಂದೂಕುಗಳನ್ನು ಹೊಂದಿದ್ದರು. ಕೋಟೆಗಳನ್ನು ಹತ್ತುವ ಕ್ಲಿಷ್ಟ ವಿಧಾನಗಳಲ್ಲೂ ಅವರನ್ನು ತರಬೇತಿಗೆ ಒಳಪಡಿಸಲಾಗುತ್ತಿತ್ತು. ಪದಾತಿ ದಳದವರ ಪೈಕಿ, ಬೇಡರು ಅತ್ಯಂತ ಗಮನ ಸೆಳೆಯುವ ಘಟಕವಾಗಿದ್ದರು, ಇದಕ್ಕೆ ಕಾರಣ, ಅವರು ಬಿಲ್ಲುಗಾರಿಕೆಯಲ್ಲಿ ಹೊಂದಿದ್ದ ಪ್ರಾವೀಣ್ಯತೆ.ಆದರೆ ಗ್ರಾಮಗಳನ್ನು ಕೊಳ್ಳೆಹೊಡೆಯುವ, ಮಹಿಳೆಯರ ಮಾನಭಂಗ ಮಾಡುವ ಹಾಗೂ ದನಕರುಗಳನ್ನು ಕದಿಯುವ ಕಾರ್ಯಗಳಲ್ಲಿ ಅವರು ಅನೇಕ ಬಾರಿ ತೊಡಗಿಕೊಳ್ಳುತ್ತಿದ್ದರಿಂದ, ಹೊಯ್ಸಳ ರಾಜರು ಅವರನ್ನು ಸೈನ್ಯದಲ್ಲಿ ಸೇರ್ಪಡೆ ಮಾಡಿ, ದಂಗೆಗಳನ್ನು ಹತ್ತಿಕ್ಕುವ ಹಾಗೂ ಹೊಸದಾದ ಪ್ರದೇಶಗಳನ್ನು ಜಯಿಸುವ ಬಲಿಷ್ಠ ಸಾಧನಗಳಾಗಿ ಬಳಸಿಕೊಳ್ಳುತ್ತಿದ್ದರು. ಈ ಕಾರಣದಿಂದ, ಅವರನ್ನು ಭಕ್ತಿಪೂರ್ವಕವಾಗಿ ಹೊಯ್ಸಳ ಬಿಡಾರದ ಗುಪ್ತ ನಿಯೋಗಿಗಳೆಂದು ಉಲ್ಲೇಖಿಸಲಾಗುತ್ತಿತ್ತು (ಹೊಯ್ಸಳ–ಬೀಡಿನ–ಪರಮ–ವಿಶ್ವಾಸಿಗಳು).

ಆನೆಗಳು ಸೇನಾ ವ್ಯವಸ್ಥೆಯ ಮುಖ್ಯ ಭಾಗವಾಗಿದ್ದು ಅವುಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿತ್ತು. ಯೋಧರನ್ನು ಹೋಲುವ (ವಧಕರ್ಮ) ಮಾನವಾಕೃತಿಯ ತುಂಬಿಸಿದ ವಸ್ತುಗಳನ್ನು ಅವುಗಳ ಮುಂದಿಟ್ಟು, ಅವನ್ನು ತುಳಿಯುವುದನ್ನು ಹೇಳಿಕೊಡಲಾಗುತ್ತಿತ್ತು. ಆನೆ ಹಾಗೂ ಯೋಧರ ನಡುವಣ ಅಭ್ಯಾಸಗಳನ್ನು ಹಾಗೂ ಕಾಳಗಗಳನ್ನೂ ಕೆಲವು ಶಾಸನಗಳು ಹೆಸರಿಸಿವೆ. ಪ್ರಕೃತಿದತ್ತವಾಗಿ ಅಥವಾ ಭದ್ರಕೋಟೆಗಳ ಅಬೇಧ್ಯವಾದ ಕೋಟೆಗಳ ಮೇಲೆ ಧಾಳಿ ನಡೆಸಲು ಆನೆಗಳನ್ನು ಮುಖ್ಯವಾಗಿ ಬಳಸುತ್ತಿದ್ದರು. ದೈನಂದಿನ ಉದ್ದೇಶ ಹಾಗೂ ಯುದ್ಧಗಳಿಗಾಗಿ ಅರಣ್ಯಗಳಲ್ಲಿ ಇರುವ ಆನೆಗಳನ್ನು ಸೆರೆಹಿಡಿದು, ಅವುಗಳಿಗೆ ತರಬೇತಿ ನೀಡಲಾಗುತ್ತಿತ್ತು. ಯುದ್ಧದಲ್ಲಿ, ರಕ್ಷಣೆಯ ಮೊದಲ ಸಾಲಾಗಿ ಆನೆಗಳನ್ನು ಬಳಸುತ್ತಿದ್ದರಿಂದ, ನಿರ್ದಿಷ್ಟ ಸಂಖ್ಯೆಯ ಆನೆಗಳನ್ನು ಸೆರೆಹಿಡಿದು, ನಿರ್ವಹಿಸುವ ಅತ್ಯಗತ್ಯ ಹೊಣೆಯು ಸಾಮಂತರದಾಗಿತ್ತು. ಈ ಉದ್ದೇಶಕ್ಕಾಗಿ,



ರಾಜಭವನ, ಬೆಂಗಳೂರು

ವಿಧಾನಸೌಧ, ಬೆಂಗಳೂರು



ರಾಜರು ಸಾಮಂತರಿಗೆ ಗ್ರಾಮಗಳನ್ನು ದಾನವಾಗಿ ನೀಡುತ್ತಿದ್ದರು.

ಸೇನಾ ಸೇವೆಯು ಯಾವುದೇ ನಿರ್ದಿಷ್ಟ ಜಾತಿಗೆ ಸೀಮಿತವಾಗಿರಲಿಲ್ಲ, ಆದರೆ, ಪ್ರತ್ಯೇಕವಾದ ಜಾತಿಯ ತುಕಡಿಗಳನ್ನು ವ್ಯವಸ್ಥೆಗೊಳಿಸಿ, ಅವುಗಳನ್ನು ಬ್ರಾಹ್ಮಣರ ಅಡಿಯಲ್ಲಿ ಇರಿಸಲಾಗುತ್ತಿತ್ತು. ಅತ್ಯಂತ ಮಹಾನ್ ದಂಡನಾಯಕರ ಪೈಕಿ ಬ್ರಾಹ್ಮಣರಿದ್ದರು, ಅಲ್ಲದೆ ಅಕ್ಕಸಾಲಿಗರು ಹಾಗೂ ಕ್ಷೌರಿಕರೂ ಸೈನ್ಯದಲ್ಲಿದ್ದರು.ಅಭಿಲಾಷಿತಾರ್ಥ-ಚಿಂತಾಮಣಿಯಲ್ಲಿ, ಜಾತಿವಾರು ವಿಂಗಡನೆಯಾದ ನಿಯಮಿತ ಹಾಗೂ ಅನಿಯಮಿತ ತುಕಡಿಗಳು ಪದಾತಿ ಸೈನ್ಯದಲ್ಲಿ ಇದ್ದವು ಎಂದು ತಿಳಿಸುತ್ತದೆ. ಯುದ್ಧ ಗೆಲ್ಲಲು ಒಗ್ಗಟ್ಟು ಅತ್ಯಗತ್ಯವಾದ ಅವಶ್ಯಕತೆಯಾಗಿದ್ದು, ಜಾತಿಯ ವ್ಯತ್ಯಾಸಗಳಿಂದ ಉಂಟಾಗಬಹುದಾದ ವೈಯಕ್ತಿಕ ಮತ್ಸರ ಹಾಗೂ ಕಟುವಾದ ನಿಷ್ಠುರತೆಯನ್ನು ತಪ್ಪಿಸಲು, ಇದನ್ನು ಕರಾರುವಕ್ಕಾಗಿ ನಿರ್ವಹಿಸಲಾಗುತ್ತಿತ್ತು ಎಂದು ತೋರುತ್ತದೆ.ಕುದುರೆ, ಆನೆ, ಪುರುಷ ಆಳುಗಳು, ಉತ್ಕೃಷ್ಟ ಅಧಿಕಾರಿಗಳು (ತೆಂಕರು) ಹಾಗೂ ಬಾಡಿಗೆಯ ಸೈನಿಕರನ್ನು ಒಳಗೊಂಡ ತಮ್ಮದೇ ಆದ ಸೈನ್ಯವನ್ನು ಎಲ್ಲ ಸಾಮಂತರು ಹಾಗೂ ದಂಡನಾಯಕರು ಹೊಂದಿದ್ದರು.ಆಕ್ರಮಣಕಾರರನ್ನು ಹಿಂದಕ್ಕೆ ತಳ್ಳಲು ಯುದ್ಧಭೂಮಿಯಲ್ಲಿ ಅಥವಾ ಗಡಿಯ ಧಾಳಿಗಳಲ್ಲಿ ವಿಶಿಷ್ಟ ಸೇವೆಯನ್ನು ಸಲ್ಲಿಸಿದ ಸೈನಿಕರನ್ನು ಕೆಲವೊಮ್ಮೆ ಬಾಡಿಗೆಗೆ ನೇಮಕ ಮಾಡಿಕೊಳ್ಳುತ್ತಿದ್ದರು.

ಕೆಳ ಮಟ್ಟಗಳಲ್ಲಿ ಸ್ಥಳೀಯ ಅಧೀನ ಅಧಿಕಾರಿಗಳು ಬಹಳಷ್ಟು ಸಂಖ್ಯೆಯ ಸಣ್ಣ ಸೈನ್ಯಗಳನ್ನು ನಿರ್ವಹಿಸುತ್ತಿದ್ದುದರಿಂದ, ಒಬ್ಬರ ಮೇಲೊಬ್ಬರು ಮೇಲುಗೈಯನ್ನು ಸ್ಥಾಪಿಸಿಕೊಳ್ಳುವ ಸಲುವಾಗಿ ಘರ್ಷಣೆಗಳು ನಡೆಯುತ್ತಿದ್ದವು. ವೈರಿಯ ವಿರುದ್ಧ ನಡೆಸುವ ಅನೇಕ ವೈಷಮ್ಯಪೂರ್ಣ ಪ್ರದರ್ಶನಗಳಲ್ಲಿ ಒಂದೆಂದು ಪರಿಗಣಿಸಲಾದ ದನಕರುಗಳನ್ನು ಕದಿಯುವುದರೊಂದಿಗೆ, ಗಡಿಯ ಘರ್ಷಣೆಗಳು ಸಾಮಾನ್ಯವಾಗಿ ಪ್ರಾರಂಭವಾಗುತ್ತಿತ್ತು. ದನಕರುಗಳನ್ನು ಕದಿಯುವ ಹಾಗೂ ಮಹಿಳೆಯರ ಮಾನಭಂಗ ಮಾಡುವ ಕಾರ್ಯಗಳು, ಅಧಿಕಾರದ ಉಲ್ಲಂಘನೆಯ ಕಾರ್ಯಗಳಾಗಿ ಎರಡೂ ಕಡೆಗಳ ನಡುವೆ ಘರ್ಷಣೆಗಳು ನಡೆಯುತ್ತಿದ್ದವು. ರಕ್ಷಣೆ, ಸಂರಕ್ಷಣೆ ಹಾಗೂ ಪ್ರತೀಕಾರದ ಉದ್ದೇಶಗಳಿಗಾಗಿ ನೇಮಕ ಮಾಡಿಕೊಳ್ಳಲಾದ ಸ್ಥಳೀಯ ನಾಯಕರಿಗೆ, ಉಂಟಾಗುತ್ತಿದ್ದ ಗಡಿಯ ಧಾಳಿಗಳ ಪುನರಾವರ್ತನೆಗಳು ನಿರಂತರ ಹವ್ಯಾಸವಾಗಿ ಪರಿಣಮಿಸಿತು. ವಿಜಯಕ್ಕಾಗಿ ನಡೆದ ಯುದ್ಧಗಳು ಹಾಗೂ ದಂಡಯಾತ್ರೆಗಳ ತಯಾರಿಗಳು ಕೂಲಂಕಷವಾಗಿದ್ದು, ಸೈನ್ಯದ ಗಾತ್ರವು ಅದರ ಚಾಕಚಕ್ಯತೆಗಿಂತ ಹೆಚ್ಚು ಮುಖ್ಯವಾದವು. ನಿಯಮಿತ ಹಾಗೂ ಅನಿಯಮಿತ ತುಕಡಿಗಳು, ರಾಜನ ದೂತರು, ಸೇವಕರು ಹಾಗೂ ಬಾಡಿಗೆಯ ಸೈನಿಕರೆಲ್ಲರೂ ಸೈನ್ಯದ ಭಾಗವಾಗಿದ್ದವು. ಸೈನ್ಯವು ನಡೆದುಕೊಂಡು ಹೋದಾಗ ಶಂಖ, ತುತ್ತೂರಿ ಹಾಗೂ ನಗಾರಿಗಳನ್ನು ಬಡಿಯುತ್ತಿದ್ದರು ಜವನಿಕ ಅಥವಾ ಡೇರೆಗಳನ್ನು ಯುದ್ಧಭೂಮಿಯಲ್ಲಿ ಬಿಡಾರ ಹೂಡಲು ಬಳಸುತ್ತಿದ್ದರು. ಯುದ್ಧವು ಪ್ರಾರಂಭವಾಗುವ ಮುನ್ನ, ಸೈನಿಕರ ನಿಷ್ಠಾವಂತ ನೆರವನ್ನು ಪಡೆಯಲು ಹಾಗೂ ಅವರ ಶೌರ್ಯ ಹಾಗೂ ಸಾಹಸಗಳನ್ನು ಪ್ರದರ್ಶಿಸುವ ಸಲುವಾಗಿ ಪ್ರೇರೇಪಿಸಲು, ರಾಜರು ಸೈನಿಕರಿಗೆ ದಾನಗಳನ್ನು ನೀಡುತ್ತಿದ್ದನು.ಯುದ್ಧದಲ್ಲಿ ಮಡಿದ ಮಹಾಯೋಧರ ಕುಟುಂಬಗಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನೂ ರಾಜರು ಮಾಡುತ್ತಿದ್ದರು.

ಆನೆಗಳು ಸೇನಾ ರಕ್ಷಣೆಯ ಪ್ರಥಮ ಪಂಕ್ತಿಯಲ್ಲಿದ್ದು, ಅವುಗಳನ್ನು ಸರಪಳಿಗಳಿಂದ ಬಂಧಿಸಿ ಮಾಹುತರಿಕಾರರಿಂದ ನಡೆಸಲಾಗುತ್ತಿತ್ತು. ಬಿಲ್ಲು-ಬಾಣಗಳನ್ನು ಹಿಡಿದ ಪದಾತಿ ಸೈನ್ಯವು ಅದನ್ನು ಹಿಂಬಾಲಿಸುತ್ತಿತ್ತು. ಸೈನ್ಯಕ್ಕಾಗಿ ಆಹಾರವನ್ನು ಹೊತ್ತ ಅಶ್ವಪಡೆ ಹಾಗೂ ಹೇರುಬಂಡಿಗಳು ಅದರ ಹಿಂದಿನ ಸಾಲಿನಲ್ಲಿ ಇರುತ್ತಿತ್ತು. ಸೇನಾ ಗುತ್ತಿಗೆದಾರರು ಹಾಗೂ ವಡ್ಡವ್ಯವಹಾರಿ ಎಂಬ ಬಿರುದನ್ನು ಹೊತ್ತ ಬಟ್ಟೆ ಹೊಲಿಯುವವರು ಇರುತ್ತಿದ್ದರು.ರಾಜನ ರಥ ಅಥವಾ ಸೈನ್ಯದ ಮುಂದಿದ್ದ ಆನೆಗಳಿಗೆ ಬಾವುಟವನ್ನು ಜೋಡಿಸಲಾಗುತ್ತಿತ್ತು.ಕೆಲವು ಸಂದರ್ಭಗಳಲ್ಲಿ, ಯಾದವರ ವಿರುದ್ಧ ನಡೆದ ಎರಡನೆಯ ನರಸಿಂಹನು ನಡಿಗೆಯಲ್ಲಿ ವಿವರಿಸಿರುವಂತೆ ಬಾವುಟ ಧ್ವಜದ ಮೇಲಿನ ವಿಶೇಷ ಹೌದಾ (ಅಂಬಾರಿ)ಯ ಮೇಲೆ ವೈರಿಯ ತಲೆಯನ್ನು ಇರಿಸಲಾಗುತ್ತಿತ್ತು. ಗಾಢವಾದ ಶಬ್ದವನ್ನು ಮಾಡುವ ನಗಾರಿಯನ್ನು ಹೊಡೆದಾಗ ಅದು ದೂರದವರೆಗೂ ಕೇಳಿಸಿ ಸೈನಿಕರ ಹುಮ್ಮಸ್ಸನ್ನು ಹೆಚ್ಚಿಸಿ, ವೈರಿಗಳ ಎದೆಯಲ್ಲಿ ನಡುಕವನ್ನು ಹುಟ್ಟಿಸುತ್ತಿತ್ತು.ಯುದ್ಧಕ್ಕೆ ನಡೆಯುವ ಮುನ್ನ, ರಾಜ ಅಥವಾ ಸೇನಾಧಿಪತಿಗಳು ದೇವಾಲಯಗಳಿಗೆ ದೇಣಿಗೆ ನೀಡುವುದು ಅಥವಾ ಇಷ್ಟ ದೈವಕ್ಕೆ ಗೌರವಾರ್ಪಣೆಗಳನ್ನು ಸಲ್ಲಿಸುವುದು ವಾಡಿಕೆಯಾಗಿತ್ತು.ಎರಡನೆಯ ಬಲ್ಲಾಳನು, ತನ್ನ ನೆಚ್ಚಿನ ದೇವರಾದ ವಿಜಯನಾರಾಯಣನಿಗೆ ತೋರಿದ ಶ್ರದ್ಧಾ-ಭಕ್ತಿಗಳೇ, ದಕ್ಷಿಣ ಸಾಮ್ರಾಜ್ಯವನ್ನು ಪಡೆದುಕೊಳ್ಳಲು ನೆರವಾಯಿತೆಂದು ಹೇಳಲಾಗುತ್ತದೆ.

ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ಹೊಯ್ಸಳ ರಾಜರಿಂದ ಬಳುವಳಿಯಾಗಿ ಬಂದ ಆಡಳಿತ ವ್ಯವಸ್ಥೆಯನ್ನು ವಿಜಯನಗರದ ಅರಸರು ಬದಲಾಯಿಸಲಿಲ್ಲ.ಪೇಸ್, ನಿಕೋಲಾ ಕೋಂಟಿ ಹಾಗೂ ಅಬ್ದುಲ್ ರಜ್ಞಾಕ್‌ನಂತಹ ವಿದೇಶೀ ಯಾತ್ರಿಕರು ನಗರದ ಅದ್ಭುತ ಸಂಪತ್ತು, ಅದರ ವ್ಯಾಪಾರ ಹಾಗೂ ವ್ಯಾಪಾರಸ್ಥರು, ಕುಲೀನರು ಹಾಗೂ ರಾಜಕುಮಾರರ ಅಮೋಘವಾದ ಅರಮನೆಗಳು ಹಾಗೂ ಅಭೇದ್ಯ ಕೋಟೆ-ಕೊತ್ತಲಗಳಿಗೆ ರುಜುವಾತು ನೀಡಿದ್ದಾರೆ.ಗಣಿಕ (ವ್ಯಭಿಚಾರಿ) ಮನೆತನಗಳ ಭವ್ಯತೆಯನ್ನೂ ಸಹ ವಿವರಿಸಲಾಗಿದೆ.ವೈವಿಧ್ಯಮಯ ವಿನೋದಗಳು ಹಾಗೂ ಹಬ್ಬ-ಹರಿದಿನಗಳು, ಆ ಕಾಲದ ಹರ್ಷದಾಯಕ ಚೈತನ್ಯಕ್ಕೆ ಸ್ಫುಟವಾದ ಸಾಕ್ಷಿಯಾಗಿದೆ.

ತಾಳೀಕೋಟೆಯ ಯುದ್ಧದ ನಂತರ ಹಾಗೂ ಮುಸಲ್ಮಾನ ಅರಸರ ಅದುರಾಕ್ರಮಣದಿಂದ ವಿಜಯನಗರ ಸಾಮ್ರಾಜ್ಯದ ವಿಭಜನೆ ಉಂಟಾಗಿ, ನೂತನ ರೀತಿಯ ಆಡಳಿತವನ್ನು ಪರಿಚಯಿಸಲಾಯಿತು.ಆಡಳಿತ ಉದ್ದೇಶಗಳಿಗಾಗಿ ಪ್ರದೇಶವನ್ನು ಪರಗಣಗಳಾಗಿ ವಿಂಗಡಿಸಲಾಯಿತು.ಮುಸಲ್ಮಾನ ಅರಸರ ಅಡಿಯಲ್ಲಿ ಬಂದ ತರಫ್‌ಗಳು, ಮಂಜೆ, ಹಾಗೂ ಮುಜುರೆಗಳಂತಹ ಅಧೀನವಾದ ವಿಭಾಗಗಳನ್ನು ಬಿಜಾಪುರ, ಗುಲ್ಬರ್ಗಾ, ರಾಯಚೂರು ಹಾಗೂ ಸಿರಾದ ಭಾಗಗಳಲ್ಲಿ ಆಯೋಜಿಸಲಾಯಿತು.ಅದರಂತೆಯೇ, ಮರಾಠರು ಸಂಪ್ರತ್ತಿ ಲೆಕ್ಕಿಗರೊಂದಿಗೆ ಸಂಬಂಧಿಸಿದ ಜಾಗೀರ್‌ಗಳ ವ್ಯವಸ್ಥೆಯನ್ನೂ, ಹಾಗೂ ದೇಶಪಾಂಡೆ, ದೇಶಕುಲಕರ್ಣಿ, ಸರ್-ನಾಡ್ ಗೌಡ್ ಹಾಗೂ ದೇಶಮುಖ್‌ರಂತಹ ಲೆಕ್ಕ ನಿರ್ವಹಣೆ ಮಾಡುವ ದೇಶೀಯ ಪದವಿಗಳನ್ನೂ ಪರಿಚಯಿಸಿದರು.



ಮೈಸೂರಿನಲ್ಲಿ ಒಡೆಯರ್ ಆಳ್ವಿಕೆ, ಅದರಲ್ಲೂ ಚಿಕ್ಕದೇವರಾಯ ಒಡೆಯರ್ ಆಳ್ವಿಕೆಯ ಅಡಿಯಲ್ಲಿ, ಔರಂಗ್‌ಜ಼ೇಬ್ ಆಳ್ವಿಕೆಯ ದೆಹಲಿ ಸಾಮ್ರಾಜ್ಯಶಾಹಿ ಆಸ್ಥಾನದ ಆಚರಣೆಯನ್ನು ಅನುಸರಿಸಲಾಯಿತು ರಾಜ್ಯವನ್ನು ೧೮ ಕಛೇರಿಗಳಾಗಿ ವಿಂಗಡಿಸಲಾಯಿತು; ಅವುಗಳೆಂದರೆ ನಿರೂಪ–ಚಾವಡಿ (ಕಾರ್ಯದರ್ಶಿಯ ಇಲಾಖೆ), ಲೆಕ್ಕದ–ಚಾವಡಿ (ಲೆಕ್ಕ–ಪತ್ರ), ಸೀಮೆ–ಕಂದಾಚಾರ (ದಿನಸಿ ಹಾಗೂ ಸೇನಾ ಅಂಗಡಿಗಳು), ಬಾಕಲ್–ಕಂದಾಜಾರ, ಉಭೈಕ–ವಿಚಾರ, ಸುಂಕದ–ಚಾವಡಿ (ಸುಂಕ), ಪೋಮ್ ಹಾಗೂ ತುಂಡೆ–ಚಾವಡಿ, ದೇವಸ್ಥಾನ–ಚಾವಡಿ (ದೇವಾಲಯ ನಿರ್ವಹಣೆ), ಕಬ್ಬಿಣ–ಚಾವಡಿ (ಕಬ್ಬಿಣದ ತಯಾರಿಕೆ), ಹೊಗೆಸೊಪ್ಪಿನ–ಚಾವಡಿ (ಹೊಗೆಸೊಪ್ಪು) ಇತ್ಯಾದಿ. ಸೂಕ್ತವಾಗಿ ತುಂಬಿದ ಖಜಾನೆಯು ರಾಜ್ಯವೊಂದರ ಮೂಲಾಧಾರವಾದ ಕಾರಣದಿಂದ, ಸುವ್ಯವಸ್ಥಿತವಾಗಿ ಹಾಗೂ ವಿಸ್ತೃತವಾಗಿ ಹರಡಿದ ತೆರಿಗೆ ವ್ಯವಸ್ಥೆ ಹಾಗೂ ಬಿಗಿಯಾದ ಆರ್ಥಿಕ ವ್ಯವಸ್ಥೆಯನ್ನು ಅಳವಡಿಸಿಕೊಂಡು ಈ ಆಚರಣೆಯನ್ನು ಸುದೀರ್ಘ ಕಾಲದವರೆಗೂ ಮುಂದುವರಿಸಲಾಯಿತು. ಮನೆ–ತೆರಿಗೆ, ದೇವಾದಾಯ–ಉತ್ತ, ಉಪ್ಪಿನ–ಮತ (ಉಪ್ಪಿನ ಮೇಲಿನ ತೆರಿಗೆ), ತೆರೆದ–ಬಾಗಲು, ಮದಿವೆ ತೆರಿಗೆ (ಮದುವೆಯ ತೆರಿಗೆ), ಅಂಗಡಿಪಸ್ಸರ (ಅಂಗಡಿಗಳ ಮೇಲಿನ ತೆರಿಗೆ), ಕಾವಡಿ–ತೆರಿಗೆ, ಹೇರು–ಸುಂಕ, ಹುಲ್ಲಣ, ಜಾತಿ ಮಾನ್ಯ (ಜಾತಿಯ ಮೇಲಿನ ತೆರಿಗೆ), ಮಗ್ಗ ಕಂದಾಯ (ಮಗ್ಗಗಳ ಮೇಲಿನ ತೆರಿಗೆ), ಇವುಗಳನ್ನು ಬೊಕ್ಕಸ ತುಂಬಿಸಲು ಹಾಗೂ ಬರ ಹಾಗೂ ಯುದ್ಧದಂತಹ ಗಂಭೀರ ತುರ್ತುಪರಿಸ್ಥಿತಿಗಳನ್ನು ನಿರ್ವಹಿಸಲು ಪರಿಚಯಿಸಲಾಯಿತು. ಕ್ರಿ.ಶ.೧೬೪೮–೭೦ರವರೆಗೆ ಬಿದನೂರಿನಿಂದ ಆಳಿದ ಶಿವಪ್ಪ ನಾಯಕನ ಅದ್ಭುತ ಆರ್ಥಿಕ ಕೌಶಲ್ಯ, ಸಿಸ್ತು ಅಥವಾ ಭೂಮಾಪನದ ಪರಿಚಯ ಹಾಗೂ ಪ್ರಹಾರ್ ಪಟ್ಟಿ ಅಥವಾ ಅಡಿಕೆಯ ಮೇಲಿನ ಹಾಲತ್‌ನ ಸಂಗ್ರಹಣೆಗೆ ನಿಯಮಗಳನ್ನು ಪರಿಚಯಿಸಿದ ಖ್ಯಾತಿಯು ಸಲ್ಲುತ್ತದೆ. ಕರ್ನಾಟಕದ ತೋದರ್‌ಮಲ್ ಎಂದು ಆತನನ್ನು ಕರೆಯುತ್ತಿದ್ದರು. ಭೂದಾಖಲೆ, ವರ್ಗೀಕೃತ ಕ್ಷೇತ್ರ, ಉತ್ಪನ್ನ ಹಾಗೂ ದರಗಳ ಸರಾಸರಿ ಪ್ರಮಾಣ ಹಾಗೂ ಎಲ್ಲ ರೀತಿಯ ಅನಿಶ್ಚಿತತೆಗಳನ್ನು ಒಳಗೊಂಡ ಖರ್ಚು–ವೆಚ್ಚದ ಪ್ರಮಾಣವನ್ನು ವ್ಯವಸ್ಥಿತ ರೀತಿಯಲ್ಲಿ ರೂಪಿಸಿದ ರೀತಿಯು ಶ್ಲಾಘನೀಯವಾದುದು.

ಹಿಂದಿನ ಕಾಲದಿಂದ ಬಳುವಳಿಯಾಗಿ ಪಡೆದ ಆಡಳಿತ ವ್ಯವಸ್ಥೆಯನ್ನು, ದಿವಾನ್ ಪೂರ್ಣಯ್ಯನವರ ಕಾಲದಲ್ಲಿ ವಿಸ್ತರಿಸಲಾಯಿತು.ಮುಂದೆ ಮೈಸೂರಿನಲ್ಲಿ ಜಾರಿಗೆ ಬಂದ ಕಮೀಷನರ್ ಆಳ್ವಿಕೆಯು ಕ್ರಿ.ಶ.೧೮೩೪ರ ನಂತರ, ನ್ಯಾಯಾಂಗ ವ್ಯವಸ್ಥೆ, ಪೊಲೀಸ್, ಸಾರ್ವಜನಿಕ ಕಾಮಗಾರಿಗಳು, ಸ್ಥಳೀಯ ಕರಗಳು, ಭೂ ಕಂದಾಯ ವ್ಯವಸ್ಥೆ, ಪೌರ ಸೇವೆ, ಉದ್ಯಮ ಹಾಗೂ ವಾಣಿಜ್ಯಗಳೆಲ್ಲವನ್ನೂ ವ್ಯವಸ್ಥಿತವಾಗಿ ಪರಿಶೀಲಿಸಿ, ಪರಿಷ್ಕರಿಸಿ ಹಾಗೂ ಮರುವಿನ್ಯಾಸಗೊಳಿಸಲಾಯಿತು. ಕಮೀಷನರ್ ಆಳ್ವಿಕೆಯ ಕಾಲದ ಅನೇಕ ಅಂಶಗಳನ್ನು, ಇಂದಿಗೂ ಕರ್ನಾಟಕದ ಆಡಳಿತ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಉಳಿಸಿಕೊಳ್ಳಲಾಗಿದೆ. ಅಂತೆಯೇ ಬಾಂಬೆ ಹಾಗೂ ಮದ್ರಾಸ್ ಪ್ರಾಂತಗಳಲ್ಲೂ ಹಲವಾರು ಬದಲಾವಣೆಗಳನ್ನು ಬ್ರಿಟಿಷರು ಮಾಡಿದರು.


ಜಿಲ್ಲಾಧಿಕಾರಿಗಳ ಕಚೇರಿ ಮೈಸೂರು